www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

**ಸಂಪುಟ -10 ಸಂಚಿಕೆ - 1 ಜನವರಿ 2014**
Volume : X Issue : I January 2014

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

**ಒಳ ಪುಟಗಳಲ್ಲಿ**

1. ಪ್ರಕಟಣೆ
2. ಸಾಕ್ಷಿಯ ಸ್ವರ
3. ಕ್ರಿಸ್ತನ ಮೂಲಕ ಆಶೀರ್ವಾದಗಳು
4. ವಯಸ್ಕರ ಸ್ವರ – ಹೊಸ ವರ್ಷದಲ್ಲಿ ಹೊಸ ಆಶೀರ್ವಾದ
5. ದೇವರಿಂದ ಹೊಸ ಆಶೀರ್ವಾದಗಳನ್ನು ಎದುರು ನೋಡುವುದು
6. ಅನಾಥರ ಸ್ವರ
7. ಯೌವನಸ್ಥರ ಸ್ವರ
8. ನೀತಿವಂತನ ಆಶೀರ್ವಾದಗಳು
9. ಪ್ರಾರ್ಥನಾ ಸ್ವರ
10. ಮಹಿಳೆಯರ ಸ್ವರ
11. ಆರೋಗ್ಯ ಸ್ವರ
12. ಡಿಜಿಎಮ್ ಬೇತೇಲ್ ಅಂಕಣ
13. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ನನ್ನ ವಂದನೆಗಳು ಮತ್ತು ಹೊಸ ವರ್ಷದ ಶುಭಾಶಯಗಳು. ಕಳೆದ ವರ್ಷದಲ್ಲಿ ಅನೇಕ ಸೋಲಗಳು, ನೋವುಗಳು, ಸಮಸ್ಯೆಗಳನ್ನು ನಾವು ಅನುಭವಿಸಿರಬಹುದು. ದೇವರ ಮಕ್ಕಳಾದ ನಮಗೊಂದು ನಿರೀಕ್ಷೆ ಇದೆ. ನಾವು ಹೊಸದಾದ ಆರಂಭವನ್ನು ಆರಂಭಿಸಿ ಜಯಗಳಿಸಲು ಸಾಧ್ಯವಿದೆ. ಸತ್ಯವೇದದಲ್ಲಿ ರೂತಳ ಪುಸ್ತಕದಲ್ಲಿ ನೊವೊಮಿ ಮತ್ತು ಅವಳ ಕುಟುಂಬದ ಚರಿತ್ರೆಯನ್ನು ಓದುತ್ತೇವೆ. ಬೇತ್ಲೆಹೇಮಿನಲ್ಲಿ ಬರಗಾಲ ಬಂದಾಗ ದೇವರ ಜನರಾದ ನೊವೊಮಿ ಅವರ ಕುಟುಂಬವು ಜೀವನಮಾಡಲು ಮೋವಾಬ್‌ನ್ನು ಹರಿಸಿ ಹೊರಟರು. ಅಲ್ಲಿ ನೊವೊಮಿಯು ತನ್ನ ಗಂಡನನ್ನು ಮತ್ತು ಇಬ್ಬರು ಮಕ್ಕಳ ಮರಣದ ಮೂಲಕ ಕಳೆದುಕೊಳ್ಳಬೇಕಾಯಿತು. ಮೋವಾಬ್‌ನಲ್ಲಿ ನೊವೊಮಿಯ ಕುಟುಂಬಕ್ಕೆ ಊಟ ವಸತಿ ಎಲ್ಲವೂ ಇದ್ದರೂ ಕೂಡಾ ಮನಸ್ಸಿಗೆ ಸಮಾಧಾನವಿರಲಿಲ್ಲ. ಒಂದರ ನಂತರ ಒಂದು ಕಹಿಯಾದ ಅನುಭವಗಳನ್ನು ಅವರು ದಾಟಬೇಕಾಯಿತು. ಕೊನೆಗೆ ರೂತ. 1:6ರ ಪ್ರಕಾರ **"ಯೆಹೋವನು ತನ್ನ ಜನರನ್ನು ಕಟಾಕ್ಷಿಸಿ ಅವರಿಗೆ ಆಹಾರವನ್ನು ಅನುಗ್ರಹಿಸಿದ್ದಾನೆಂಬ ವರ್ತಮಾನವನ್ನು ಕೇಳಿದ ನೊವೊಮಿಯು ಮೋವಾಬ್ ದೇಶದಿಂದ ಸ್ವದೇಶಕ್ಕೆ ಹೋಗಬೇಕೆಂದು ಸೊಸೆಯರೊಡನೆ ಹೊರಟಳು"**. ನೊವೊಮಿ ಒಂದು ಶುಭಸಂದೇಶವನ್ನು ಕೇಳಿ ಪುನ: ಬೇತ್ಲೆಹೇಮಿನ ಕಡೆಗೆ ಹೊರಟಳು. ಬೇತ್ಲೆಹೇಮಿನಲ್ಲಿ ಜನರು ನೊವೊಮಿಯ ಕುರಿತು ಮಾತನಾಡುತ್ತಿರುವಾಗ ಅದನ್ನು ಕೇಳಿಸಿಕೊಂಡ ನೊವೊಮಿಯು ನನ್ನನ್ನು ನೊವೊಮಿ ಎಂದು ಕರೆಯಬೇಡಿ, ಮಾರಾ ಎಂದು ಕರೆಯಿರಿ ಅಂದಳು. ನೊವೊಮಿ ಅಂದರೆ ರಮೀಣಿಯರು, ಮಾರಾ ಅಂದರೆ ಕಹಿ ಎಂದರ್ಥ. ಜೀವಿತದ ಎಲ್ಲವನ್ನು ಕಳೆದುಕೊಂಡಿರುವ ನೊವೊಮಿಯು ಬೇತ್ಲೆಹೇಮಿನಲ್ಲಿ ಪರಿಶುದ್ಧ ದೇವರ ಆಶ್ರಯದಲ್ಲಿ ಹೊಸ ಆರಂಭವನ್ನು ಆರಂಭಿಸಿದಳು. ನೊವೊಮಿಯ ಜೀವಿತವು ಚಿಗುರಿತು. ಅವಳು ಕರ್ತನಿಂದ ಆಶೀರ್ವದಿಸಲ್ಪಟ್ಟಳು. ಕ್ರಿಸ್ತನಲ್ಲಿ ನನ್ನ ಪ್ರಿಯ ಸಹೋದರ/ಸಹೋದರಿಯರೇ ಕಳೆದ ವರ್ಷ ನಿಮ್ಮ ಜೀವಿತವನ್ನು ಹಿಂತಿರುಗಿ ನೋಡುವುದಾದರೆ ನೊವೊಮಿ ಹಾಗೆ ಅನೇಕ ಸಂಗತಿಗಳನ್ನು ಕಳೆದುಕೊಂಡು ಚಿಂತಿತರು, ದುಃಖಿತರು ನೀವು ಆಗಿರಬಹುದು. ಆದರೆ ಕರ್ತನಾದ ಯೇಸುಕ್ರಿಸ್ತನಲ್ಲಿ ನಿಮಗೊಂದು ನಿರೀಕ್ಷೆ ಇದೆ. ಹೊಸ ವರ್ಷದ ಆರಂಭದಲ್ಲಿ ನಿಮ್ಮ ದಾಂಪತ್ಯದ ಜೀವಿತದಲ್ಲಿ, ಆತ್ಮೀಕ ಜೀವಿತದಲ್ಲಿ, ಸೇವೆಯಲ್ಲಿ, ವ್ಯಾಪಾರದಲ್ಲಿ, ಕುಟುಂಬದಲ್ಲಿ, ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟು ಹೊಸ ವರ್ಷವನ್ನು ಆರಂಭಿಸಿ ನೊವೊಮಿಯ ಜೀವಿತವನ್ನು ಚಿಗುರುವಂತೆ ಮಾಡಿದ ಕರ್ತನು ನಿಶ್ಚಯವಾಗಿ ನಿಮ್ಮ ಜೀವಿತವನ್ನು ಚಿಗುರುವಂತೆ ಮಾಡುವನು. ಆ ದರ್ಶನವನ್ನು ನಿಮ್ಮ ಮನಸ್ಸಿನಲ್ಲಿಟ್ಟು ಹೊಸ ವರ್ಷವನ್ನು ಆರಂಭಿಸಿರಿ. **"ನಿನ್ನ ಮೊದಲನೆಯ ಸ್ಥಿತಿಯು ಅಲ್ಪವಾಗಿದ್ದರೂ ನಿನ್ನ ಕಡೆ ಸ್ಥಿತಿಯು ಬಹಳವೃದ್ಧಿ ಹೊಂದುವದು"** (ಯೋಬ. 8:7).

ಕರ್ತನು ನಿಮ್ಮನ್ನು ಆಶೀರ್ವದಿಸಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕ

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಹಾಗಾದರೆ ಕಳ್ಳತನದಿಂದ ಸಭೆಗೆ ಹೊಕ್ಕುವುದು ಅಂದರೇನು? ಗಲಾತ್ಯ2:4–5ರ ಪ್ರಕಾರವಾಗಿ ರಕ್ಷಣೆ ಹೊಂದಲು ಪ್ರಧಾನವಾದ ಕೆಲವು ಕಾರ್ಯಗಳನ್ನು ನಾವು ತಿಳಿದುಕೊಂಡಿದ್ದೇವೆ.

1)ಪಾಪ ಎಂಬ ಗ್ರಹಿಕೆ 2)ಪಾಪಗಳಿಗಾಗಿ ಪಶ್ಚಾತ್ತಾಪ 3)ಪಾಪಗಳ ಅರಿಕೆ 4)ಪಾಪವನ್ನು ಬಿಟ್ಟು ಬಿಡುವುದು 5)ಕ್ರಿಸ್ತನಲ್ಲಿ ನಂಬಿಕೆ ಇಡುವುದು 6)ಕ್ರಿಸ್ತನನ್ನು ರಕ್ಷಕನಾಗಿ, ಒಡೆಯನಾಗಿ ತಮ್ಮ ಜೀವಿತದ ಯಜಮಾನನಾಗಿ ಅಂಗೀಕರಿಸುವುದು. 7)ದೇವರಿಗಾಗಿ ಪರಿಶುದ್ಧ ಜೀವನ ಜೀವಿಸುವ ತೀರ್ಮಾನ ತೆಗೆದುಕೊಳ್ಳುವುದು. 8)ತಂದೆ ಮಗ ಪರಿಶುದ್ಧಾತ್ಮನ ಹೆಸರಿನಲ್ಲಿ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ತೆಗೆದುಕೊಳ್ಳುವುದು.

ಅನೇಕರು ಸರಿಯಾದ ಮಾನಸಾಂತರವಿಲ್ಲದೆ ಯೇಸುವನ್ನು ನಂಬುವರು ಮತ್ತು ದೀಕ್ಷಾಸ್ನಾನ ತೆಗೆದುಕೊಳ್ಳುವರು. ಇನ್ನು ಕೆಲವರು ಸರಿಯಾದ ಮಾನಸಾಂತರವೂ ಇಲ್ಲ, ಕ್ರಿಸ್ತನಲ್ಲಿ ಸರಿಯಾದ ನಂಬಿಕೆಯೂ ಇಲ್ಲ ಆದರೆ ದೀಕ್ಷಾಸ್ನಾನ ತೆಗೆದುಕೊಳ್ಳುತ್ತಾರೆ.

ಮತ್ತಾಯ 3:8ರಲ್ಲಿ ಸ್ನಾನಿಕ ಯೋಹಾನನು ಮಾನಸಾಂತರ ಇಲ್ಲದೆ ತನ್ನ ಬಳಿಗೆ ದೀಕ್ಷಾಸ್ನಾನ ತೆಗೆದುಕೊಳ್ಳಲು ಬಂದಂತಹ ಫರಿಸಾಯರನ್ನು, ಸದ್ದುಕಾಯರನ್ನು ಗದರಿಸುವುದನ್ನು ಕಾಣಬಹುದು. **"ಹಾಗಾದರೆ ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತೆಂಬುದನ್ನು ತಕ್ಕ ಫಲದಿಂದ ತೋರಿಸಿರಿ."**

ಹೀಗೆ ಜೀವಿತದಲ್ಲಿ ಸರಿಯಾದ ಮಾನಸಾಂತರ ಪಡದೆ ಬರುವ ವ್ಯಕ್ತಿಗಳು ಸಭೆಯಲ್ಲಿ ಗೊಂದಲವನ್ನುಂಟು ಮಾಡುತ್ತಾರೆ ಮತ್ತು ಸಭೆಯಲ್ಲಿ ಅನೇಕ ಸಮಸ್ಯೆಗಳನ್ನು ಉಂಟುಮಾಡುತ್ತಾರೆ. ಈ ವ್ಯಕ್ತಿಗಳು ದೇವರ ವಾಕ್ಯಕ್ಕಿಂತಲೂ ಸಂಪ್ರದಾಯಕ್ಕೆ ಮತ್ತು ಮತದ ಆಚರಣೆಗೆ ಹೆಚ್ಚಿನ ಗಮನ ಕೊಡುತ್ತಾರೆ.

ಮಾರ್ಕ 7:6–8, ಮತ್ತಾಯ 15:8–9 ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ. ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಭೋದಿಸುವುದರಿಂದ ನನಗೆ ಭಕ್ತಿ ತೋರಿಸುವುದು ವ್ಯರ್ಥ ಎಂಬುದೇ. ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು ಕಲ್ಪಿಸಿದ ಸಂಪ್ರದಾಯವನ್ನು ಹಿಡಿದಿದ್ದೀರಿ ಎಂದು ಹೇಳಿದನು.

ಗಲಾತ್ಯ ಸಭೆಯಲ್ಲಿ ಯೆಹೂದ್ಯರಿಂದ ಕೆಲವರು ರಕ್ಷಣೆ ಹೊಂದಿ ಕ್ರಿಸ್ತನ ಸಭೆಗೆ ಸೇರಿದ್ದರು. ಆದರೆ ಅವರು ಸರಿಯಾಗಿ ಮಾನಸಾಂತರ ಪಡದೆ ಇದ್ದುದರಿಂದ ಅವರು ಬಿಟ್ಟು ಬಂದ ಮತದ ಆಚರಣೆಗೆ ಹೆಚ್ಚಿನ ಗಮನ ಕೊಡುತ್ತಿದ್ದರು. ಮಾತ್ರವಲ್ಲದೆ ಉಳಿದವರು ಹಾಗೆ ಮಾಡಲು ಪ್ರೇರಪಣೆ ಕೊಡುತ್ತಿದ್ದರು. ದೇವರ ವಾಕ್ಯ ಕ್ರಿಸ್ತನಲ್ಲಿರುವ ನಂಬಿಕೆಯ ಮೂಲಕ ರಕ್ಷಣೆ ಎಂದು ಹೇಳುತ್ತಿದ್ದರು. ಸಭೆಯ ಗಲಿಬಿಲಿಗೆ ಅವರು ಕಾರಣರಾಗುತ್ತಿದ್ದರು. ಆದಕಾರಣ ಪೌಲನು ಅವರನ್ನು ಕಳ್ಳತನದಿಂದ ಸಭೆಯೊಳಗೆ ಹೊಕ್ಕಿರುವ ಸುಳ್ಳು ಸಹೋದರರು ಎಂದು ಹೇಳುತ್ತಿದ್ದಾನೆ.

**ಯಾಕೆ ಅವರು ಈ ರೀತಿ ಮಾಡಲು ಕಾರಣ** ?

1) ಸರಿಯಾದ ಮಾನಸಾಂತರ ಮತ್ತು ನಂಬಿಕೆ ಇಲ್ಲ. (2ಕೊರಿ 7:10)
2) ದೇವರ ವಾಕ್ಯವನ್ನು ಸರಿಯಾಗಿ ತಿಳಿದಿಲ್ಲ. (ಮತ್ತಾಯ 13:23)
3) ಕಪಟ ಭಕ್ತಿ (ನಿಜವಾದ ಭಕ್ತಿ ಅವರಲ್ಲಿ ಇಲ್ಲ).
4) ದೇವರ ಭಯ ಅವರಲ್ಲಿ ಇಲ್ಲ.
5) ದೇವರ ವಾಕ್ಯದ ಮೇಲೆ ನಂಬಿಕೆ ಇಡುವುದಕ್ಕಿಂತ, ಮತದ ಆಚರಣೆ ಮೇಲೆ ಹೆಚ್ಚಿನ ನಂಬಿಕೆ.
6) ದೇವರಿಗಾಗಿ ಒಂದು ವೈರಾಗ್ಯ ಇಲ್ಲ.
7) ದೇವರ ಸಭೆಯ ಮೇಲೆ ಪ್ರೀತಿ ಇಲ್ಲ.

**2) ಭಕ್ತಿಯ ವೇಷವಿದ್ದು ಅದರ ಬಲ ಬೇಡವೆನ್ನುವವರು ಆಗಿರುವರು** (2 ತಿಮೊಥಿ. 3:5): ಇಂದು ಪಾಪದಲ್ಲಿ, ವಿವಿಧ ಧರ್ಮಗಳಲ್ಲಿ ಅನೇಕ ಮೋಸಗಾರರು ಬೇರೆ ಬೇರೆ ವಸ್ತ್ರಗಳನ್ನು ಧರಿಸಿ ನಿಷ್ಕಳಂಕ ಜನರನ್ನು ಮೋಸ ಮಾಡುವುದನ್ನು ನಾವು ಕಾಣಬಹುದು. ಅದೇ ರೀತಿ ಕರ್ತನ ಸಭೆಯಲ್ಲಿಯೂ ಅನೇಕ ಜನರು ತಾವು ಭಕ್ತರೆಂದು ತೋರಿಸುವುದಕ್ಕಾಗಿ, ಅನೇಕ ಭಕ್ತಿಯ ಕಾರ್ಯಗಳನ್ನು ಮಾಡುತ್ತಾರೆ. ಅವರ ರಹಸ್ಯ ಜೀವಿತದಲ್ಲಿ ಅನೇಕ ಅಶುದ್ಧವಾದ, ಮಲಿನವಾದ ಪಾಪಗಳಲ್ಲಿ ತುಂಬಿರುತ್ತಾರೆ. ಎಫೆ 5:12 ಆ ಜನರು ರಹಸ್ಯವಾಗಿ ನಡೆಸುವ ಕೆಲಸಗಳನ್ನು ಕುರಿತು ಮಾತಾಡುವುದಾದರೂ ನಾಚಿಕೆಗೆ ಕಾರಣವಾಗಿದೆ.

ಒಂದೇ ಮಾತಿನಲ್ಲಿ ಹೇಳಬೇಕಾದರೆ ಅನೇಕರಲ್ಲಿ ಇಂದು ಭಕ್ತಿ ಬಹಳವಿದೆ. ಆದರೆ ದೇವರ ಭಯವಿಲ್ಲ. ಅವರಲ್ಲಿ ದೇವರ

ನಾನು ನಿಮಗೆ ಹಿತ ಮಾಡುವದನ್ನು ಬಿಟ್ಟು ವಿಮುಖನಾಗೆನು ಎಂಬುವ ಶಾಶ್ವತವಾದ ಒಡಂಬಡಿಕೆಯನ್ನು ವರೊಂದಿಗೆ ಮಾಡಿಕೊಳ್ಳುವೆನು (ಯೆರೆ. 32:40).

ಭಯವಿಲ್ಲದ ಕಾರಣ ಅನೇಕ ಪಾಪಗಳನ್ನು ಬಹಿರಂಗವಾಗಿಯೂ, ರಹಸ್ಯವಾಗಿಯೂ ಮಾಡುತ್ತಾರೆ. ತಾವೂ ಎಡವಿ ಬೀಳುತ್ತಾರೆ, ಇತರರನ್ನು ಎಡವಿ ಬೀಳುವಂತೆ ಮಾಡುತ್ತಾರೆ. **"ಯೆಹೋವನ ಭಯವು ಪಾಪ ದ್ವೇಷವನ್ನು ಹುಟ್ಟಿಸುತ್ತದೆ. ಗರ್ವ, ಅಹಂಭಾವ, ದುರ್ಮಾರ್ಗತನ, ಕುಟಿಲ ಭಾಷಣ ಇವುಗಳನ್ನು ಹಗೆ ಮಾಡುತ್ತೇನೆ"** (ಜ್ಞಾನೋ. 8:13).

ಪಾಪದಿಂದ ನಾವು ಪ್ರತ್ಯೇಕಿಸಲ್ಪಡದೇ ಎಷ್ಟು ಭಕ್ತಿ ಮಾಡಿದರೂ ಅದನ್ನು ದೇವರು ಅಂಗೀಕಾರ ಮಾಡುವುದಿಲ್ಲ. ಕೀರ್ತ. 93:5 ರಲ್ಲಿ ಸದಾ ಆತನ ಮನೆಗೆ ಯೋಗ್ಯವು ಪರಿಶುದ್ಧತ್ವವೇ ಎಂದು ತಿಳಿಸುತ್ತದೆ. ಅನೇಕರ ಜೀವಿತದಲ್ಲಿ ಭಕ್ತಿಯನ್ನು ಕಾಣುವಾಗ ಜನರು ಆಶ್ಚರ್ಯಪಡುತ್ತಾರೆ. ಒಳ್ಳೆಯ ಜನರಂತೆ ನಟನೆ ಮಾಡುತ್ತಾರೆ, ಆದರೆ ಇತರರನ್ನು ದೂರುವುದು, ಸೇವಕರನ್ನು ದೂರುವುದು, ತಪ್ಪು ಹೊರಿಸುವುದು, ಬೈಯುವುದು, ತಪ್ಪಾದ ಸುದ್ಧಿ ಹಬ್ಬಿಸುವುದು, ದ್ವೇಷ ಇಟ್ಟುಕೊಳ್ಳುವುದು, ಸಮಾಧಾನ ಆಗದಿರುವುದು, ಹೊಟ್ಟೆಕಿಚ್ಚು, ಕೋಪ, ಹಗೆ ಇವೆಲ್ಲದರಿಂದ ರಕ್ಷಣಹೊಂದಿದವರನ್ನು, ರಕ್ಷಣೆ ಹೊಂದಲ್ಲಿಕ್ಕೆ ಇರುವವರನ್ನು ದಾರಿತಪ್ಪಿಸಿ ಬಿಡುತ್ತಾರೆ. ಇಂಥ ವ್ಯಕ್ತಿಗಳಲ್ಲಿ ಸರಿಯಾದ ಪರಿಶುದ್ಧತೆ ಇಲ್ಲದಿರುವುದರಿಂದಲೂ ಹಾಗೂ ದೇವರ ಭಯ ಇಲ್ಲದಿರುವುದರಿಂದಲೂ ಸಭೆಯಲ್ಲಿ ಹಿಂಸೆ ಮತ್ತು ಅನೇಕ ಸಮಸ್ಯೆಗಳು ಬರುತ್ತವೆ.

ಮುಂದುವರೆಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

## ಸಾಕ್ಷಿಯ ಸ್ವರ

* ನನಗೆ ಅನೇಕ ದಿನಗಳಿಂದ ಕಾಲು ನೋವಿನಿಂದ ಬಳಲುತ್ತಿದ್ದೆ ಕೆರೀತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟದಲ್ಲಿ ಕರ್ತನು ನನ್ನನ್ನು ಮುಟ್ಟಿ ಸಂಪೂರ್ಣ ಗುಣಪಡಿಸಿದ್ದಾನೆ ಕರ್ತನ ನಾಮಕ್ಕೆ ಸ್ತೋತ್ರ



* ನನಗೆ ಸಮಾಧಾನವಿರಲಿಲ್ಲ ಕಟ್ಟಲ್ಪಟ್ಟ ಅವಸ್ಥೆಯಲ್ಲಿದ್ದೆ. ತಲೆಸುತ್ತು, ಹೃದಯ ವೇದನೆಯಿಂದ ಮಾನಸಿಕವಾಗಿ ಬಳಲುತ್ತಿದೆ. ಚಿಂತೆಯು ನನ್ನನ್ನು ಕಾಡಿಸುತ್ತಿತ್ತು. ಇವೆಲ್ಲವನ್ನು ತಿಳಿದ ದೇವರು ನನ್ನ ಹೆಸರಿಡಿದು ಕರೆದು ನನ್ನ ಎಲ್ಲಾ ಸಮಸ್ಯೆಗಳಿಂದ ಕೆರೀತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟದಲ್ಲಿ ಪರಿಪೂರ್ಣವಾಗಿ ಬಿಡಿಸಿದನು.

– **ಮೀರಾ** (ಮಂಗಳೂರು)

* (ಸುಮಾರು 3 ವರ್ಷದಿಂದ ಕಾಲು ಗಂಟುನೋವಿನಿಂದ ಬಳಲುತ್ತಿದ್ದೆ. ದೇವರು ಈ ಕೂಟದಲ್ಲಿ ಕೆರೀತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟದಲ್ಲಿ ದೇವರು ನನ್ನನ್ನು ಸಂಪೂರ್ಣ ಗುಣಪಡಿಸಿದ್ದಾನೆ.



– **ಅಣ್ಣಿ,**

* ಸುಮಾರು ವರ್ಷದಿಂದ ಊಟಮಾಡುವುದಕ್ಕೆ ಆಗುತ್ತಿರಲಿಲ್ಲ ತಿಂದ ಕೂಡಲೇ ತೆಗಿನ ಮೂಲಕ ಹುಳಿಬರುತ್ತಿತ್ತು. ಹಾಗೂ ಅದು ವಾಂತಿಯಾಗಿ ಹೊರಗೆ ಬರುತ್ತಿತ್ತು ಇದಕ್ಕೆ ನಾನು ಅನೇಕ ವೈದ್ಯರ ಬಳಿ ಚಿಕಿತ್ಸೆಮಾಡಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಕೆರೀತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟದಲ್ಲಿ ಕರ್ತನು ನನ್ನನ್ನು ಸಂಪೂರ್ಣವಾಗಿ ಗುಣಪಡಿಸಿದ್ದಾನೆ.



– **ಫಿಲೋಮಿನಾ** (ಉ

* ಸುಮಾರು ತಿಂಗಳುಗಳಿಂದ ನನ್ನ ಕಿವಿ ಕೇಳುತ್ತಿರಲಿಲ್ಲ. ದೇವರು ಈ ಕೂಟದಲ್ಲಿ ಕೆರೀತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟದಲ್ಲಿ ದೇವರು ನನ್ನನ್ನು ಸ ಗುಣಪಡಿಸಿದ್ದಾನೆ.



– **ವಸಂತಿ,**

* ಅನೇಕ ಚಿಂತೆಗಳಿಂದಲೂ, ವೇದನೆಗಳಿಂದ ನಾನು ಬಳಲುತ್ತಿದ್ದೆ. ವಾಕ್ಯದ ರಹಸ್ಯವಾಗಲಿ, ಮರ್ಮವಾಗಲಿ ನನಗೆ ಪ್ರಕಟವಾಗುತ್ತಿರಲಿಲ್ಲ. ದೇವರು ಈ ಕೂಟದಲ್ಲಿ ಕೆರೀತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟದಲ್ಲಿ ವಾಕ್ಯದ ಆಳವಾದ ರಹಸ್ಯವನ್ನು ತಿಳಿದುಕೊಳ್ಳಲು ಸಹಾಯಮಾಡಿದನು.



ನಾನು ಜಜ್ಜಿಹೋದ ದೀನಮನದೊಂದಿಗೆ ಇದ್ದುಕೊಂಡು ದೀನನ ಆತ್ಮವನ್ನೂ ಜಜ್ಜಿಹೋದ ಮನಸ್ಸನ್ನೂ ಉಜ್ಜೀವಿಸುವವನಾಗಿದ್ದೇನೆ (ಯೆಶಾ. 57:15).

* ಅನೇಕ ವರ್ಷಗಳಿಂದ ಗಂಟುನೋವಿನಿಂದ ಬಳಲುತ್ತಿದ್ದೆ ಮತ್ತು ಅನೇಕ ರೀತಿಯ ದು:ಖ ನನ್ನ ಜೀವಿತವನ್ನು ಕಾಡುತ್ತಿತ್ತು. ಕರ್ತನ ಸನ್ನಿಧಾನದಲ್ಲಿ ಸಂತೋಷವಾಗಿರಲು ಸಾಧ್ಯವಾಗುತ್ತಿರಲಿಲ್ಲ ಆದರೆ ಈ ಕೆರೀತ್ ಶಕ್ತಿಯ ಕೂಟದಲ್ಲಿ ಕರ್ತನು ನನ್ನನ್ನು ಮುಟ್ಟಿ ಗುಣಪಡಿಸಿದ್ದಾನೆ ಹಾಗೂ ಆತನ ಪರಿಪೂರ್ಣವಾದ ಸಂತೋಷವನ್ನು ಅನುಭವಿಸುವಂತೆ ಸಹಾಯಮಾಡಿದ್ದಾನೆ.

– ಲೀಲಾ

* ದೇವರ ನಾಮಕ್ಕೆ ಸ್ತೋತ್ರವಾಗಲಿ. ನನ್ನ ಜೀವತದಲ್ಲಿ ದೇವರು ಮಾಡಿದ ದೊಡ್ಡ ಅದ್ಭುತ ಕಾರ್ಯಕ್ಕಾಗಿ ದೇವರಿಗೆ ಸ್ತೋತ್ರಸಲ್ಲಿಸುತ್ತೇನೆ. ಅದು ಏನೆಂದರೆ ನನಗೆ ಮದುವೆಯಾಗಿ 16 ವರ್ಷ ಆಗಿತ್ತು. ನಾನು ಮತ್ತು ನನ್ನ ಗಂಡ 3 ಮೂರು ಮಕ್ಕಳು ಸಂತೋಷವಾಗಿ ಇದ್ದೇವು. ಇತ್ತೀಚಿನ ಅಂದರೆ 2 ವರ್ಷದಿಂದ ನಮ್ಮಿಬ್ಬರ ಮಧ್ಯದಲ್ಲಿ ಸಮಸ್ಯೆಯಿಂದ ಬೇರೆ ಬೇರೆಯಾಗಿದ್ದೇವು, ಆದರೆ ಈಗ ಈ ಪ್ರಾರ್ಥನಾ ಕೂಟದಲ್ಲಿ ಕರ್ತನ ಕರುಣೆ, ದಯೆಯಿಂದ ನಮ್ಮಿಬ್ಬರನ್ನು ಒಂದುಗೂಡಿಸಿದ ದೇವರಿಗೆ ಸ್ತೋತ್ರ, ಕೃತಜ್ಞತೆ ಸಲ್ಲಿಸುತ್ತೇನೆ. ನಮ್ಮನ್ನು ಈ ಕೂಟಕ್ಕೆ ಆಮಂತ್ರಿಸಿದವರು ಅಣ್ಣಿ.



ದೇವರಿಗೆ ಸ್ತೋತ್ರ

* ದೇವರ ನಾಮಕ್ಕೆ ಸ್ತೋತ್ರವಾಗಲಿ. ನನಗೆ ಈ ಕೂಟದಲ್ಲಿ ದೇವರ ವಾಕ್ಯದ ಮೂಲಕ ತುಂಬಾ ಉತ್ತೇಜನವಾಗಿದೆ, ಯಾಕೆಂದರೆ ನನ್ನ ನಡತೆಯನ್ನು ಮತ್ತು ಸ್ವಭಾವನ್ನು ಇನ್ನೂ ಕ್ರಮಪಡಿಸಲು ಸಹಾಯವಾಯಿತು ಮತ್ತು ನನ್ನ ಮಗನು ನಾನು ಪ್ರಾರ್ಥನೆಗೆ ಬಂದ ಮೇಲೆ ತನ್ನ ತಂದೆಯೊಡನೆ ಫೋನ್ ಮಾಡಿ ಮಾತಾಡುವಂತೆ ದೇವರು ಕೃಪೆಮಾಡಿದ್ದಾರೆ ಅದಕ್ಕಾಗಿ ನಾನು ದೇವರಿಗೆ ಸೋತ್ರ ಮಾಡುತ್ತೇನೆ.

**– ನಳಿನಿ, ಬಂಟ್ವಾಳ, ಬೇತೆಲ್ ಚರ್ಚ್, ಪುತ್ತೂರು**

---


## ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**




**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 9902334941**



**"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ."** ಜ್ಞಾನೋಕ್ತಿ 22:9.

ನಾನು ದೇವರಾತ್ಮನಿಂದಲೇ ನಿರ್ಮಿತನಾಗಿದ್ದೇನೆ, ನನ್ನ ಜೀವವು ಸರ್ವಶಕ್ತನ ಶ್ವಾಸದಿಂದುಂಟಾಗಿದೆ (ಯೋಬ. 33:4).

# ಕ್ರಿಸ್ತನ ಮೂಲಕ ಆಶೀರ್ವಾದಗಳು

ಕ್ರಿಸ್ತನ ಸಂದೇಶವು ನಮ್ಮ ಆತ್ಮಗಳಿಗೆ ಸಂತಸವನ್ನು ತರುವಂತಹ ಸುಸಮಯವಾಗಿರುತ್ತದೆ. ಆ ಶುಭ ದಿನದಂದು ದೇವರು ಮನುಷ್ಯನ ರೋಪವನನು ಕಣ್ಣಿನ ಕಾಣಿಸಿಕೊಂಡನು. ಅದಕ್ಕೋಸ್ಕರವೇ ಎಲ್ಲಾ ಮಾನವ ಕುಲದವರು ಸೇರಿ ಸುವಾರ್ತೆಯನ್ನು ಹೇಳುತ್ತಾರೆ.

ಆದಾಗ್ಯೂ ಇನ್ನು ಕುಲವರು ಯೇಸು ಕ್ರಿಸ್ತನು ಈ ಲೋಕದಲ್ಲಿ ಏತಕ್ಕಾಗಿ ಜನಿಸಿದರು ಎಂದು ಆಶ್ಚರ್ಯ ಪಡೆತ್ತಾರೆ. ಈ ಪ್ರಶ್ನೆಗೆ ಉತ್ತರ ಕೆಳಕಂಡ ವಾಕ್ಯದಲ್ಲಿ ಕಾಣಬಹುದು.

**"ಆಕೆಯು ಒಬ್ಬ ಮಗುವನನು ಹಡೆಯುವಳು; ನೀನು ಅವನಿಗೆ 'ಯೇಸು' ಎಂದು ಹೆಸರಿಡಬೇಕು; ಯಾಕೆಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು".** ಮತ್ತಾಯ 1:21

ಈ ಹೇಳಿಕೆಯನ್ನು ದೇವದೂತನು ಮರಿಯಳೊಂದಿಗೆ ನಿಶ್ಚಯವಾಗಿದ್ದ ಯೋಸೇಫನಿಗೆ ಹೇಲೀದನು. ಪೌಲನು ಹೀಗೆ ಹೇಳುತ್ತಾನೆ ಕ್ರಿಸ್ತ ಯೇಸು ಪಾಪಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು" 1ತಿಮೋ 1:15.

ಹೌದು ಮಾನವ ಕುಲವನ್ನು 'ಪಾಪದ' ಬಂಧನದಿಂದ ವಿಮೋಚಿಸಲು ದೇವರು ಈ ಲೋಕದಲ್ಲಿ 'ಯೇಸು' ಎಂಬ ಹೆಸರಿನಿಂದ ಜನಿಸಿದನು ಎಂಬುದು ಸತ್ಯವಾಗಿರುತ್ತದೆ.

ನಾನು ಒಮ್ಮೆ ಮನಕರಗುವಂತಹ ಕಥೆಯನ್ನು ಓದಿದ. ಒಂದು ಹೊರ ದೇಶದಲ್ಲಿ ಕುರಿಹಿಂಡುಗಳ ಜತೆಯಲಲಿ ಒಬ್ಬ ಕುರುಬನು ಬೆಟ್ಟಗುಡ್ಡಗಳ ಪ್ರದೇಶದಲ್ಲಿ ಜೀವಿಸುತ್ತಿದ್ದರು. ಒಂದು ದಿನ ಭಾರಿ ಬಿರುಗಾಲಿಯಿಂದಾಗಿ ತನ್ನ ಕುರಿಹಿಂಡಿನಿಂದ ಒಂದು ಕುರಿ ತಪ್ಪಿಸಿ ಕೊಂಡಿರುವುದನ್ನು ತಿಳಿದುಕೊಂಡನು. ಆ ಕುರುಬನ ಮಗನು ತಂದೆಯ ಚಿತ್ತದಂತೆ ತಪ್ಪಸಿಕೊಂಡ ಕುರಿಯನ್ನು ಹುಡುಕಲು ಹೊರಟನು. ಅವನು ಆರು ಘಂಟೆಗಳ ಕಾಲ ಭಯಂಕರ ಚಳಿಯಲ್ಲಿ ತಡೆರಹಿತವಾಗಿ ಹುಡುಕಾಡಿದ ನಂತರ, ಅವನು ತನ್ನ ಕುರಿಯನ್ನು ಕಂಡು ಮಹ ಸಂತೋಷಪಟ್ಟನು. ಆದರೆ ಅವನು ಮನೆಗೆ ಹಿಂತಿರುಗಿದ ನಂತರ ಅವನು ಅನಾರೋಗ್ಯದಿಂದ ಹಾಸಿಗೆ ಇಡಿಯಬಾಕಾಯಿತು.

ಈ ಕಾಯಿಲೆಯಾದ ಮನುಷ್ಯನಿಗೆ ಸಂತೈಸುವಿಕೆಯ ಮತುಗಳನ್ನು ಬೋಧಿಸಲು ಒಬ್ಬ ಬೋಧಕನನ್ನು ಕರೆಸಲಾಯಿತು. ಆ ಬೋದಕನು ಸತ್ಯವೇದದಲ್ಲಿ ಲೂಕ 15;4–6 ರಲಲಿ ಬರೆದಿರುವ ಒಂದು ಸಾಮ್ಯದ ಬಗ್ಗೆ ವಿವರಿಸಿದನು. ಅದರಲ್ಲಿ ಹೇಗೆ ಕುರುವನು ತಾನು ಕಳೆದುಕೊಂಡ ಕುರಿಮರಿಯನ್ನು ಹುಡುಕಿದನು. ನಂತರ ಅದು ಸಿಕ್ಕಿದ ಮೇಲೆ ಪಟ್ಟ ಸಮತೋಷದ ಬಗ್ಗೆ ವರ್ಣಿಸಿದನು. ಆದರೆ ಸಾಮ್ಯದಲಲಿ ಹೇಳಿರುವ ಕುರುಬನಿಗೂ ಮತ್ತು ಈತನಿಗೂ ಏನು ವ್ಯತ್ಯಾಸ ಅಂದರೆ ಆ ಬೋಧಕನು ಸಂತೈಸುತ್ತಿದ್ದ ಯುವಕನು ಕಾಯಿಲೆಯಿಂದ ಸಾವಿನ ಹಾಸಿಗೆಯಲ್ಲಿದ್ದನು. ಅದೇ ರೀತಿಯಲ್ಲಿ 2000 ವರ್ಷಗಳ ಹಿಂದೆ ದೇವರು ತನ್ನ ಒಬ್ಬನೇ ಮಗನನ್ನು ಈ ರೀತಿಯಾದ ಸ್ಥಿತಿಯಿಂದ ಆತನು ತನ್ನ ಪ್ರಾಣವನ್ನು ಶಿಲುಬೆಯ ಮೇಲೆ ನೀಡಬೇಕಾಯಿತು.

ಬೋಧಕನು ಹೇಳಿದ ಮಾತನ್ನು ಕೇಳೀದ ಆ ಯುವಕನು, ಕರ್ತನಾದ ಯೇಸು ಕ್ರಿಸ್ತನು ಮನುಷ್ಯ ರೂಪದಲ್ಲಿ ಈ ಲೋಕಕ್ಕೆ ಬಂದು ಮಾನವರನ್ನು ಕೇವಲ ಪಾಪದಿಂದ ರಕ್ಷಿಸಲು ಮತ್ತು ತಮದೆಯಾದ ದೇವರೊಂದಿಗೆ ನಿರಂತರ ಜೀವಿತ ಮಾರ್ಗದ ಬಗ್ಗೆ ಮಾರ್ಗದರ್ಶನಕ್ಕಾಗಿ ಬಂದಿರುವುದು ನನಗೆ ಚೆನ್ನಾಗಿ ಗೊತ್ತು ಎಂದು ಗಟ್ಟಿಯಾಗಿ ಕೂಗುತ್ತಾ **"ಕರ್ತನಾದ ಯೇಸುವೇ, ನೀನು ಶಿಲುಬೆಯ ಮೇಲೆ ಕೊಟ್ಟ ಪ್ರಾಣವು ನಮ್ಮಂತವರಿಗಾಗಿಯೇ ಎಂದು ನನಗೆ ಚಿನ್ನಾಗಿ ತಿಳಿದೆದೆ."** ಎಂದು ಒತ್ತಿ ಹೇಳಿದನು. ಈ ರೀತಿ ಅವನು ಹೇಳುತಿರುವಾಗಲೇ ಅವನ ಹೃದಯದಲ್ಲಿ ದೈವಿಕ ಸಂತೋಷ ತುಂಬಿಕೊಂಡಿತು ಮತ್ತು ಸಮಾಧಾನವು ನೆಲಸಿತು. ನಂತರ ಅವನ ಆತ್ಮ ಅವನನ್ನು ಬಿಟ್ಟು ಪರಲೋಕದಲ್ಲಿರುವ ದೇವರಲ್ಲಿಗೆ ಹೋಯಿತು.

ಹೌದು ನನ್ನಪ್ರಿಯ ಸಹೋದರರೇ ಮತ್ತು ಸಹೋದರಿಯರೇ ನಮ್ಮನ್ನು ಪಾಪದ ಬಂಧನದಿಂದ ರಕ್ಷಿಸಲೂ ಮತ್ತು ನಮ್ಮನ್ನು ಆತನ ಕಡೆಗೆ ಸೆಳೆಯುವಂತೆಯೂ ದೇವರು ತನನ್ ಒಬ್ಬನೇ ಮಗನನ್ನು ಶರೀರಧಾರಿಯಾಗಿ ಈ ಲೋಕಕ್ಕೆ ಕಳುಹಿಸಿಕೊಟ್ಟನು. (1ತಿಮೋ 3:16).

ನಾವು ಸಂಪೂಣವಾಗಿ ಹೇಗೆ ಪಾಪವನ್ನು ನಾಶ ಮಾಡುವದು?

**"....... ರಕ್ತಧಾರೆಯಿಲ್ಲದೆ ಪಾಪ ಪರಿಹಾರ**

ಚೀಯೋನಿನ ಯಾವ ನಿವಾಸಿಯೂ ತಾನು ಅಸ್ವಸ್ಥನು ಎಂದು ಹೇಳನು; ಅಲ್ಲಿಯ ಜನರ ಪಾಪವು ಪರಿಹಾರವಾಗುವದು (ಯೆಶಾ. 33:24).

**ಉಂಟಾಗುವದಿಲ್ಲ".** (ಇಬ್ರಿ 9:22)

ರಕ್ತದಿಂದ ಮಾತ್ರ ಮನುಷ್ಯನು ಪಾಪ ಹೇಗೆ ನಿರ್ಮೂಲ ಮಾಡುವುದು? ಸತ್ಯವೇದ ಹೀಗೆ ಹೇಳುತ್ತದೆ. **" ಯಾಕೆಂದರೆ ಪ್ರತಿ ದೇಹಿಗೂ ರಕ್ತವೇ ಪ್ರಾಣಾಧಾರ .......ರಕ್ತವು ಪ್ರಾಣಧಾರವಾಗಿರುವ ಕಾರಣ ಆದರಿಂದ ದೋಷ ಪರಿಹಾರವಾಗುತ್ತದಷ್ಟೆ........ ಯಾಕೆಂದರೆ ಪ್ರತಿ ದೇಹಿಗೂ ರಕ್ತವೇ ಪ್ರಾಣಧಾರವಾಗಿದೆ".** (ಯಾಜಕ 17:11,14).

ಮಾನವ ಕುಲವನನು ಪಾಪದ ಬಂಧನದಿಂಧ ಬಿಡಿಸುವ ಉದ್ದೇಶದಿಂದ ಕ್ರಿಸ್ತನು ಮನುಷ್ಯನ ರೂಪವನ್ನು ತಾಳಿ ರುಧೀರವನ್ನು ಸುರಿಸಿದನು. ದೇವರೇ ಈ ಲೋಕಕ್ಕೆ ಶಿಶುವಾಗಿ ಬಂದ ಯೇಸುವು ಹಪಗೆ ನಮ್ಮ ಪಾಪವನನು ಕ್ಷಮಿಸಿ, ಆತನನ್ನು ಸವೀಕರಿಸಿಕೊಂಡವರಿಗೆ ಹೇಗೆ ಪವಿತ್ರಾತ್ಮನನ್ನು ತುಂಬಿದನು ಮತು ಹೇಗೆ ಅವರನ್ನು ಆಶೀರ್ವದಿಸಿದನು. ಎಂಬುದನ್ನು ಧ್ಯಾನ ಮಾಡೋಣ.

**1. ಪಾಪಗಳ ಕ್ಷಮಾಪಣೆ.**

**"...... ಪಾಪ ಮಾಡದ ಮನುಷ್ಯನ ಒಬ್ಬನೂ ಇಲ್ಲ"** ವಂಬುದಾಗಿ ಅರಸನಾದ ಸೊಲೊಮೋನನು ಹೀಗೆ ಗೋಳಾಡುವುದನ್ನು ನೋಡುತ್ತೇವೆ (1ಅರಸು 8:46) ಹೌದು ಮನುಷ್ಯನ ರಕ್ತದಲ್ಲಿ ಪಾಪವುಂಡು ಮತ್ತು ಒಬ್ಬನ ರಕ್ತಿದಿಂಧ ಮತ್ತೊಬ್ಬನ ಪಾಪವನನು ಶುದ್ಧಿ ಮಾಡಲು ಸಾಧ್ಯವಿಲ್ಲ. ಆದರೆ ಯೇಸುಕ್ರಿಸ್ತನ ರಕ್ತವು ಶುದ್ಧವಾಗಿರುತ್ತದೆ ಮತ್ತು ಯಾವ ಪಾಪವೂ ದೋಷಣೆಯೂ ಇಲ್ಲದ್ದು (1 ಪೇತ್ರ 1:19) ಅದಕ್ಕೋಸ್ಕರವೇ ಯೇಸು ಈ ರೀತಿ ಹೇಳಿರುತ್ತಾನೆ. "ನನಲ್ಲಿ ಪಾಪವನನು ತೋರಿಸಿಕೊಡುವವರು ನಿಮ್ಮೊಳಗೆ ಯಾರಿದ್ದಾರೆ? ನಾನು ಸತ್ಯವನನು ಹೇಳುವವನಾಗಿರುವಲಲಿ ನೀವು ನನನ್ ಮಾತನನು ನಂಬದೆ ಇರುವದು ಯಾಕೆ? ( ಯೋಹಾನ 8:46). ಕಲ್ವಾರಿ ಕ್ರೂಜೆಯ ಮೇಲೆ ಆತನು ತನನ್ ಶುದ್ಧವಾದ ಮತ್ತು ಪವಿತ್ರವಾದ ರಕ್ತವನ್ನು ಸುರಿಸಿದನು, ಅದು ಪೂರ್ತಿ ಮಾನವ ಕುಲದ ಪಾಪಗಳನ್ನೇ ಅಳಿಸಿ ಬಿಡುವಂತಹ ಶಕ್ತಿಯುಳ್ಳದ್ದಾಗಿದೆ.

ಒಮ್ಮೆ ಮನೆ ಕಟ್ಟುವ ಕೆಲಸಗಾರರು ಸುಣ್ಣದ ಗಡ್ಡೆಯನ್ನು ಮನೆಕಟ್ಟುವುದಕ್ಕೆ ಸಿದ್ಧಪಡಿಸಿಕೊಂಡಿದ್ದರು. ಅಲ್ಲಿ ಹತ್ತಿರದಲ್ಲಿಯೇ ಕೆಲವು ಮಕ್ಕಳು ಆಟವಾಡುತಿದ್ದರು. ಮತ್ತು ಹಾಗೆಯೇ ಒಬ್ಬ ಚಿಕ್ಕ ಹುಡುಗನು, ಜಾರಿ ಅದರೊಳಗೆ ಬಿದ್ದು ಬಿಟ್ಟನು. ಆ ಸುಣ್ಣದ ನೀರು ಅವನ ಕಣ್ಣುಗಳೊಳಗೆ ಹೊಕ್ಕಿ ಹಣ್ಣಿನೊಳಗೆ ಸೇರಿಕೊಮಡು ಆ ಸಣ್ಣ ಹುಡುಗನಿಗೆ ತಡೆಯಲಾರದಂತಹ ಉರಿಯುಂಟಾಯಿತು. ಆ ಹುಡುಗನ ಕೂಗನ್ನು ಕೇಳೀದ ಅವನ ತಾಯಿಯು ಅವನಲ್ಲಿಗೆ ಓಡಿ ಬಂದಳು ಮತ್ತು ಅಲ್ಲಿದ್ದ ಜನರು ಅವರ ಹಳ್ಳಿಯ ವೈದ್ಯನನ್ನು ಕರೆತಂದರು. ಆ ಹಳ್ಳಿಯ ವೈದ್ಯನು ಅಲ್ಲಿನ ಸಂಭೀರ ಪರಿಸ್ಥಿತಿಯನ್ನು ನೋಡಿ, ಅಲ್ಲಿದ್ದ ಜನರಿಗೆ ಒಂದು ಮೇಕೆ ಅಥವಾ ಹಸುವನ್ನು ತೆಗೆದುಕೊಂಡು ಬನ್ನಿರಿ ಎಂದು ಹೇಳಿದನು. ಆ ಪ್ರಾಣಿಯ ರಕ್ತವನ್ನು ಈ ಹುಡುಗನ ಕಣ್ಣಿನಲ್ಲಿ ಸುರಿದರೆ, ಆವಾಗ ಕಣ್ಣೀನಲ್ಲಿರುವ ಸುಣ್ಣದ ನೀರನ್ನು ಶುಚಿ ಮಾಡುತ್ತದೆ ಮತ್ತು ಹುಡುಗನ ಕಣ್ಣಿನ ದೃಷ್ಟಿಯು ಸರಿಹೋಗುತ್ತದೆ ಎಂದು ಹೇಳಿದನು. ಈ ಮಾತನ್ನು ಕೇಳೀದ ಹುಡುಗನ ತಾಯಿಯು, **"ಸ್ವಾಮಿ, ಇಂತಹ ತುರ್ತು ಪರಿಸ್ಥಿತಿಯಲ್ಲಿ ಹೇಗೆ ಮೇಕೆ ಅಥವಾ ಹಸುವನ್ನು ಇಲ್ಲಿಗೆ ತರುವುದು?" ನೀವು ಬೇಕಾದರೆ ನನ್ನ ಬೆರಳನ್ನು ಕತ್ತರಿಸಿ, ನಿಮಗೆ ಎಷ್ಟು ಬೇಕಾದಷ್ಟು ರಕ್ತವನ್ನು ತೆಗೆದುಕೊಂಡು ನನ್ನ ಮಗನ ಕಣ್ಣುಗಳನ್ನು ಗುಣಪಡಿಸಿ"** ಎಂದು ಬೇಡಿಕೊಂಡಳು. ಆ ವೈದ್ಯನು ಬೇರೆ ವಿಧಿಯೆ ಇಲ್ಲದೆ, ಆ ತಾಯಿಯ ಬೆರಳಲ್ಲಿ ರಕ್ತ ತೆಗೆದು, ಆ ಹುಡುಗನ ಕಣ್ಣುಗಳ ಮೇಲೆ ಸುರಿದನು. ಅವಳ ರಕ್ತವು ಆ ಹುಡುಗನ ಕಣ್ಣಿನ ಮೇಲೆ ತೊಟ್ಟು ಹಾಕುತ್ತಿರುವಾಗ, ತಾಯಿಯು ಬಹಳ ಅನುಕಂಪದಿಂದ **"ಮಗನೇ, ಕಣ್ಣಿನ ಹುರಿನಿಂತುಹೋಯಿತೋ ಅಥವಾ ಇನ್ನೂ ಸ್ವಲ್ಪ ರಕ್ತಸುರಿಸಲೋ?"** ಎಂದು ಕೇಳಿದಳು.

ತಾಯಿಯ ರಕ್ತವು ಮಗನ ಕಣ್ಣಿನಲ್ಲಿ ಬಿದ್ದು ಸುಣ್ಣದ ನೀರಿನ ಉರಿತ ಸಂಪೂರ್ಣವಾಗಿ ನಿಂತುಹೋಯಿತು. ತಾಯಿಯ ಪ್ರೀತಿಯು ಮಗನ ನೋವನ್ನು ಗುಣಪಡಿಸುವದಕ್ಕೆ ಎಷ್ಟು ಬೇಕೊ ಅಷ್ಟು ರಕ್ತಸುರಿಸಿ ಅವನನ್ನು ಗುಣಪಡಿಸಿತು.

ನಮ್ಮ ರಕ್ಷಕನಾದ ಕ್ರಿಸ್ತನು ಸಹ ಅದೇ ರೀತಿಯಾಗಿ ಮಾಡಿದನು, ಕೇವಲ ಒಂದು ಮಗುವಿಗಾಗಿ ಅಲ್ಲ ಆದರೆ ಪೂರ್ಣ ಜನಾಂಗಕ್ಕೆ ಮಾಡಿದನು. ಕರ್ತನಾದ ಯೇಸು ತಾನು ಹಿಡಿದುಕೊಡಲ್ಪಟ್ಟ ರಾತ್ರಿ ರೊಟ್ಟಿಯನ್ನು ತೆಗೆದುಕೊಂಡು, ಸ್ತೋತ್ರ ಮಾಡಿದ ನಂತರ, ಅವನು ಅದನ್ನು ಮುರಿದು ಹೀಗೆಂದನು: **"ಇದು ನಿಮಗೋಸ್ಕರ ಕೊಟ್ಟಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವದಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು ಈ ಪಾತ್ರೆಯನ್ನು ನನ್ನ ರಕ್ತದಿಂದ ಸ್ಥಾಪಿತವಾಗಿರುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ; ನೀವು ಇದರಲ್ಲಿ ಪಾನ ಮಾಡುವಾಗೆಲ್ಲಾ ನನ್ನನ್ನು ನೆನೆದುಕೊಳ್ಳುವದಕೋಸ್ಕರ ಪಾನ ಮಾಡಿರಿ ಅಂದನು"** (1 ಕೊರಿ. 11:23–25).

ನಾನು ನನ್ನ ಶ್ವಾಸವನ್ನು ನಿಮ್ಮಲ್ಲಿ ಹೊಗಿಸಿ ನಿಮ್ಮನ್ನು ಬದುಕಿಸಿ ನಿಮ್ಮ ದೇಶದಲ್ಲಿ ನೆಲೆಗೊಳಸುವೆನು (ಯೆಹೆ. 37:14).

ಮೇಲೆ ಹೇಳಿದ ಸ್ತ್ರೀಯು ಕೇವಲ ಅವಳ ಮಗನಿಗಾಗಿ ರಕ್ತ ಸುರಿದಳು. ಆದರೆ ಕ್ರಿಸ್ತನು ತನ್ನ ರಕ್ತವನ್ನು ಇಡೀ ಮಾನವ ಕುಲಕ್ಕೆ ಸುರಿದನು ಮತ್ತು ನಮ್ಮ ಎಲ್ಲಾ ಪಾಪಗಳನ್ನು ಹೊತ್ತುಕೊಂಡನು. **"ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು"** (ಯೆಶಾ. 53:5). ಯೇಸುವು ಸ್ವಯಂ ಪ್ರೇರಿತನಾಗಿ ನಮಗಾಗಿ ತನ್ನ ರಕ್ತವನ್ನು ಸುರಿಸಿದಾಗ್ಯೂ, ಒಬ್ಬ ರೋಮನರ ಸಿಪಾಯಿಯು ತನ್ನ ಈಟಿಯಿಂದ ಅವನ ಪಕ್ಕೆಯನ್ನು ತಿವಿದು, ಆತನ ದೇಹದಿಂದ ರಕ್ತದ ಕಡೆ ತೊಟ್ಟನ್ನು ಹೊರತೆಗೆದನು (ಯೋಹಾ. 19:9–34).

ಸತ್ಯವೇದ ಹೇಳುತ್ತದೆ, **"ಆತನ ಮಗನಾದ ಯೇಸುವಿನ** ರಕ್ತವು ಸಕಲ ಪಾಪವನ್ನು ನಿವಾರಣಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ" (1 ಯೋಹಾ. 1:7). ಅದೃಶ್ಯನಾದ ದೇವರು ಈ ಲೋಕಕ್ಕೆ ಶಿಶುವಾಗಿ ಯಾಕೆ ಬಂದನು? ಅದು ಯಾಕಂದರೆ, ಆತನು ನಮ್ಮ ರಕ್ಷಣೆಗಾಗಿಯೂ, ಲೋಕದ ಎಲ್ಲಾ ಪಾಪಿಗಳ ರಕ್ಷಣೆಗಾಗಿಯೂ ತನ್ನ ಪ್ರಾಣವನ್ನು ಕೊಟ್ಟನು. ಆತನು ಸುರಿಸಿದ ರಕ್ತವು ಎಲ್ಲಾ ಮಾನವರಿಗೆ ಸುರಿಸಿದ ದೇವರ ಸ್ವರಕ್ತವಾಗಿದೆ (ಅಪೊ. 20:28). ಆದುದರಿಂದ ಇದು ಎಲ್ಲಾ ಜನಾಂಗಕ್ಕೆ ಅಂದರೆ ಜಾತಿ, ಮತ, ಭಾಷೆಗಳ ಬೇಧ ಭಾವನೆಯಿಲ್ಲದೆ ಅನ್ವಯಿಸುತ್ತದೆ.

ನಾವೆಲ್ಲರೂ ದೇವರಲ್ಲಿ ಪ್ರಾರ್ಥನೆ ಮಾಡಿ ಆತನಿಂದ ರಕ್ಷಣೆಯನ್ನು ಹೊಂದಿಕೊಳ್ಳೋಣ. "ಪ್ರಿಯ ತಂದೆಯಾದ ಯೇಸು ಕ್ರಿಸ್ತನೇ, ಈ 2 ಸಾವಿರ ವರ್ಷಗಳ ಹಿಂದೆ ನೀನು ನಮ್ಮ ಪಾಪಗಳನ್ನು ಶುದ್ಧಿ ಮಾಡಲು ಮತ್ತು ಹೊಸ ಜೀವವನ್ನು ಕೊಡುವುದಕ್ಕೂ ಬಂದಿರುವೆ, ನೀನು ಅದಕ್ಕಾಗಿ ನಿನ್ನ ರಕ್ತವನ್ನು ಸುರಿಸಿ ನಮಗೆ ರಕ್ಷಣೆ ಕೊಟ್ಟೆ. ದಯವಿಟ್ಟು ನನಗೂ ಸಹ ಈ ಹೊಸ ಅನುಭವವನ್ನು ದಯಪಾಲಿಸು" ಎಂದು ಹೇಳಿ ರಕ್ಷಣೆಯನ್ನು ಪಡೆಯಿರಿ.

ಈ ಹೊಸ ವರ್ಷದ ಆರಂಭದಲ್ಲಿ ಕರ್ತನಾದ ಯೇಸುವು ನಮಗೆ ರಕ್ಷಣೆಯನ್ನು ದಯಪಾಲಿಸಲಿ ಮತ್ತು ನಿಮ್ಮನ್ನು ಹಾಗೂ ನಿಮ್ಮ ಕುಟುಂಬದವರನ್ನು ಸಮೃದ್ಧಿಯಾಗಿ ಆಶೀರ್ವಾದಿಸಲಿ. ನಿಮ್ಮ ಮನೆಯಲ್ಲಿ ಯಾವಾಗಲೂ ಸಂತೋಷ ತುಂಬಿರಲಿ.

ಮುಂದುವರೆಯುವದು....

ಲೇಖನ ಸಂಗ್ರಹ : ಜೇಮ್ಸ್ ಅಂಬ್ಲರ್, ಮಲ್ಪೆ.

# ಹೊಸ ವರ್ಷದಲ್ಲಿ ಹೊಸ ಆಶೀರ್ವಾದ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ವಯಸ್ಕರ ಸ್ವರ

**"ಆತನು ಅವರನ್ನು ಬೇಥಾನ್ಯದ ತನಕ ಕರಕೊಂಡು ಹೋಗಿ ತನ್ನ ಕೈಗಳನ್ನು ಎತ್ತಿ ಅವರನ್ನು ಆಶೀರ್ವದಿಸಿದನು"** (ಲೂಕ. 24:50).

ಪ್ರಿಯ ದೇವ ಮಕ್ಕಳೆಲ್ಲರಿಗೂ ಹೊಸ ವರುಷದ ಶುಭಾಶಯುಗಳು. ಈ ವರ್ಷವು ನಿಮ್ಮೆಲ್ಲರಿಗೂ ಆಶೀರ್ವಾದಾಯಕ ವರ್ಷವಾಗಲೆಂದು ಹಾರೈಸಿ ಪ್ರಾರ್ಥಿಸುತ್ತೇನೆ. ಪ್ರಿಯರೇ ನಮ್ಮ ದೇವರು ನಮ್ಮನ್ನು ಆಶೀರ್ವದಿಸುವ ದೇವರು ಮಾತ್ರವಲ್ಲದೆ ಆತನು ನಮಗೆ ಎಲ್ಲವನ್ನೂ ನೂತನಪಡಿಸುವ, ಉಜ್ಜೀವನಪಡಿಸುವ ಕರ್ತನು ಆಗಿದ್ದಾನೆ. **"ಇಗೋ ಎಲ್ಲವನ್ನೂ ಹೊಸತು ಮಾಡುತ್ತೇನೆ"** (ಪ್ರಕ. 21:5). ತಂದೆಯಾದ ದೇವರು ತನ್ನ ಮಗನಾದ ಯೇಸು ಕ್ರಿಸ್ತನನ್ನು ನಮಗಾಗಿ ಕಳುಹಿಸಿದ್ದರಲ್ಲಿ ಅನೇಕ ಉದ್ದೇಶಗಳಿರಬಹುದು. ಅದರಲ್ಲಿ ಒಂದು ನಮ್ಮನ್ನು ಆಶೀರ್ವದಿಸಬೇಕೆಂದು ನಮಗಾಗಿ ಕಳುಹಿಸಿಕೊಟ್ಟಿದ್ದಾನೆ. **"ಸೇವಕನನ್ನು ಏರ್ಪಡಿಸಿ ಈತನು ಪ್ರತಿಯೊಬ್ಬನನ್ನು ಅವನವನ ಕೆಟ್ಟನಡತೆಗಳಿಂದ ತಿರುಗಿಸಿ ನಿಮ್ಮನ್ನು ಆಶೀರ್ವದಿಸಬೇಕೆಂದು ಆತನನ್ನು ಕಳುಹಿಸಿಕೊಟ್ಟಿದ್ದಾನೆ"** (ಅಪೋ. 3:26). "ಇಸ್ರಾಯೇಲ್ಯರಿಗೆ ಶುಭವಾಗಬೇಕೆಂದು ದೇವರ ಚಿತ್ತವಾಗಿದೆ" (ಅರಣ್ಯ. 24:1). 'ದೇವರು ನಮ್ಮನ್ನು ಆಶೀರ್ವದಿಸಿದರೆ ಭಾಗ್ಯದಾಯಕವು. ಅದು ವ್ಯಸನವನ್ನು ಸೇರಿಸದು' (ಜ್ಞಾನೋ. 10:22). ಪ್ರಿಯರೇ, ಸತ್ಯವೇದದಲ್ಲಿ ಆಶೀರ್ವಾದ ಎಂಬ ಪದ 410 ಬಾರಿ ಬರೆಯಲ್ಪಟ್ಟಿದೆ. ದೇವಮಕ್ಕಳಾದ ನಾವು ಇಂದು ಆಶೀರ್ವಾದ ಹೊಂದಿ, ಇತರರನ್ನು

ಅಂತ್ಯಕಾಲದಲ್ಲಿ ಯೆಹೋವನನ್ನೂ ಆತನ ದಯೆಯನ್ನೂ ಭಯಭಕ್ತಿಯಿಂದ ಮರೆಹೋಗುವರು
(ಹೋಶೆ. 3:5).

ಆಶೀರ್ವಾದಿಸುವ ಸ್ಥಿತಿಗೆ ದೇವರು ನಡೆಸುತ್ತಾನೆ. ದೇವರು ಅಬ್ರಹಾಮನಿಗೆ 'ನೀನು ಆಶೀರ್ವಾದ ನಿಧಿಯಾಗುವಿ' (ಆದಿ. 12:3) ಎಂದು ಹೇಳಿ ಆಶೀರ್ವಾದಿಸಿದನು. ದೇವರು ಯಾರಿಗೆಲ್ಲಾ ಆಶೀರ್ವಾದಿಸುವನು ಎಂದು ಸತ್ಯವೇದದಲ್ಲಿ ಬರೆಯಲ್ಪಟ್ಟಿದೆ. 'ಆತನು ಸಣ್ಣವರು ಮೊದಲುಗೊಂಡು ದೊಡ್ಡವರ ಪರ್ಯಂತರ ಎಲ್ಲರನ್ನು ಆಶೀರ್ವದಿಸುವನು' (ಕೀರ್ತ. 115:12). ಆದರೆ ಆತನು ನಮ್ಮನ್ನು ಆಶೀರ್ವದಿಸುವಾಗ ನಮ್ಮಲ್ಲಿ ಅದನ್ನು ಹೊಂದುವ ಯೋಗ್ಯತೆವುಳ್ಳವರಾಗಿರಬೇಕು. **"ಆಶೀರ್ವಾದ ಪಾತ್ರನು ಅಲ್ಲಿ ಇದ್ದರೆ ನಿಮ್ಮ ಆಶೀರ್ವಾದವು ಅವನ ಮೇಲೆ ನಿಲ್ಲುವನು"** (ಲೂಕ. 10:6).

ಆಶೀರ್ವಾದ ಹೊಂದಲು ಯಾರು ಯೋಗ್ಯರೆಂದು ನಾವು ಧ್ಯಾನಿಸೋಣವೇ?

1) **ನೀತಿವಂತರನ್ನು ಆಶೀರ್ವದಿಸುವನು** (ಕೀರ್ತ. 5:11). ಕರ್ತನ ದೃಷ್ಟಿಯಲ್ಲಿ ನೀತಿವಂತರಾದವರನ್ನು ಆತನು ಆಶೀರ್ವದಿಸುವನು. ದೇವರು ಅಬ್ರಹಾಮನನ್ನು ತನ್ನ ಕಾರ್ಯಕ್ಕಾಗಿ ಕರೆದು ಪ್ರತ್ಯೇಕವಾಗಿ ತಾನು ತೋರಿಸುವ ದೇಶಕ್ಕೆ ಹೋಗಲು ತಿಳಿಸುತ್ತಾನೆ. ಅಬ್ರಹಾಮನು ಕೂಡಲೇ ಕರೆದಾತನ ಮಾತನ್ನು ಕೇಳಿ ನಂಬಿಕೆಯಿಂದ ಹೊರಟು ಹೋದನು (ಇಬ್ರಿ. 11:8). ವಿಧೇಯತೆಯು ನೀತಿವಂತರನ್ನಾಗಿ ಮಾಡುವದು (ರೋಮ. 5:19). ನಂಬಿಕೆಯು ನೀತಿವಂತರನ್ನಾಗಿಸುವುದು (ರೋಮ. 5:1). ದೇವರು ನೀತಿವಂತನಾದ ಅಬ್ರಹಾಮನನ್ನು ಆಶೀರ್ವದಿಸಿದನು (ಆದಿ. 24:1). ದಾವೀದನು ಬರೆಯುತ್ತಾನೆ, **"ಯೆಹೋವನು ನನ್ನ ನೀತಿಗೆ ಸರಿಯಾಗಿ ಮೇಲು ಮಾಡಿದನು. ನನ್ನ ಕೈಗಳ ಶುದ್ಧತ್ವಕ್ಕೆ ತಕ್ಕಂತೆ ಪ್ರತಿಫಲಕೊಟ್ಟನು"** (ಕೀರ್ತ. 18:20). ಯೇಸು ಈ ಲೋಕದಲ್ಲಿರುವಾಗ ಮರಣವನ್ನು ಹೊಂದುವಷ್ಟು ದೇವರಿಗೆ ವಿಧೇಯನಾಗಿ ಶ್ರೇಷ್ಠ ನಾಮವನ್ನೇ ಹೊಂದಿದನು (ಫಿಲಿ. 2:8). ತಾನು ಮಗನಾಗಿದ್ದರೂ ಭಾದೆಗಳ ಮೂಲಕ ವಿಧೇಯತೆ ಕಲಿತುಕೊಂಡನು (ಇಬ್ರಿ. 5:8).

2) **ನಂಬಿಗಸ್ತನು ಆಶೀರ್ವಾದ ಹೊಂದುವನು** (ಜ್ಞಾನೋ. 28:20). ದೇವರು ನಂಬಿಗಸ್ತರನ್ನು ಆಶೀರ್ವದಿಸುವನು. ದಾನಿಯೇಲನ ಮೇಲೆ ದೇಶಾಧಿಪತಿಗಳೂ, ಮುಖ್ಯಾಧಿಕಾರಿಗಳೂ ತಪ್ಪು ಹೊರಿಸಲು ಸಂದರ್ಭಕ್ಕೆ ಕಾಯುತ್ತಿರುವಾಗ ಅವರಿಗೆ ದಾನಿಯೇಲನ ಮೇಲೆ ತಪ್ಪು ಹೊರಿಸಲು ಕಾರಣ ಸಿಕ್ಕಲಿಲ್ಲ. ಕಾರಣ ದಾನಿಯೇಲನು ನಂಬಿಗಸ್ತನಾಗಿದ್ದನು (ದಾನಿ. 6:4). ನಂಬಿಗಸ್ತನಾದ ದಾನಿಯೇಲನು ಸಿಂಹದ ಗವಿಗೆ ಹಾಕಲ್ಪಟ್ಟರೂ ಯಾವ ಹಾನಿಯಾಗಲಿಲ್ಲ ಮಾತ್ರವಲ್ಲದೆ ದಾನಿಯೇಲನು ಘನವಂತನಾಗಿ ಬಾಳಿದನು (ದಾನಿ. 6:38). ಅರಸನಾದ ಹಿಜ್ಕೀಯನು ಮರಣಕರ ರೋಗಕ್ಕೆ ಒಳಗಾದನು. ಹಿಜ್ಕೀಯನು ದೇವರಿಗೆ ತಾನು ನಂಬಿಗಸ್ತನಾಗಿಯೂ, ಯಥಾರ್ಥನಾಗಿಯೂ ನಡಕೊಂಡಿದ್ದೇನೆ ಎಂದು ಮೊರೆಯಿಡುತ್ತಾನೆ. ದೇವರು ಆತನನ್ನು ಮರಣದಿಂದ ತಪ್ಪಿಸಿದ್ದು ಮಾತ್ರವಲ್ಲದೆ ಅನೇಕ ಆಶೀರ್ವಾದಗಳನ್ನು ದಯಪಾಲಿಸಿದನು. ಪ್ರಿಯ ದೇವಮಗುವೆ ಹೋರಾಟ ಇಕ್ಕಟ್ಟಿನ ಸಮಯದಲ್ಲಿ ದೇವರಿಗೆ ನಂಬಿಗಸ್ತನಾಗಿ ನಡಕೊಳ್ಳುವಿಯಾದರೆ ಆತನು ನಿನ್ನನ್ನು ತಪ್ಪದೇ ಆಶೀರ್ವದಿಸುವನು. ಸಭೆಯಲ್ಲಿ ನಿನಗೆ ಕೊಟ್ಟ ಜವಾಬ್ದಾರಿಗಳಲ್ಲಿ ನಂಬಿಗಸ್ತನಾಗಿರು. ಪ್ರಿಯ ದೇವ ಸೇವಕರೇ, ದೇವರು ನಿಮಗೆ ಕೊಟ್ಟ ಸೇವೆಗಳಲ್ಲಿ ನಂಬಿಗಸ್ತನಾಗಿರಿ. ಕರ್ತನು ನಿನ್ನನ್ನು ಮೇಲಕ್ಕೆ ತಂದು ಆಶೀರ್ವದಿಸುವನು.

ಮುಂದುವರಿಯುವದು.......

ಕರ್ತನಲ್ಲಿ ನಿಮ್ಮ ಪ್ರೀತಿಯ

**– ಪಾ॥ ರೊನಾಲ್ಡ್ ಮಚಾದೋ**

ಬೇತೇಲ್ ಚರ್ಚ್ ಕಾಮಗೆರೆ.

**ದಯಮಾಡಿ ನಿಮ್ಮ ಗಮನಕ್ಕೆ:** ವಿಶ್ವಾಸದ ಮನೆಯು ಕೇವಲ ರಸ್ತೆಯಲ್ಲಿರುವ ಅನಾಥರು ಹಾಗೂ ನಿರ್ಗತಿಕರಿಗೆ ಮಾತ್ರ ಮೀಸಲಾಗಿದೆ. ವಿನಹ ಮನೆಯವರಿಗಲ್ಲ. ದಯಮಾಡಿ ಯಾರ ಪ್ರಭಾವ ಅಥವಾ ಒತ್ತಡವನ್ನು ವಿಶ್ವಾಸದ ಮನೆಯ ಆಡಳಿತ ಮಂಡಳಿಗಾಗಲಿ ಅಥವಾ ಇನ್ಯಾವ ಸಭೆಯವರಿಗಾಗಲಿ, ಸೇವಕರಿಗಾಗಲಿ ಮಾಡಬಾರದೆಂದು ಈ ಮೂಲಕ ನಮ್ಮ ಎಲ್ಲಾ ಓದುಗರಿಗೂ ಮತ್ತು ಹಿತೈಷಿಗಳಿಗೂ ನಮ್ರತೆಯಿಂದ ಕೇಳಿಕೊಳ್ಳುತ್ತೇವೆ.

**– ಸಂಪಾದಕರು, ದೇವರ ಸ್ವರ.**

ನಾನು ನನಗೆ ಕೊಡಲ್ಪಟ್ಟ ಮಕ್ಕಳು ಚೀಯೋನ್ ಪರ್ವತದಲ್ಲಿ ವಾಸವಾಗಿರುವ ಸೇನಾಧೀಶ್ವರನಾದ ಕರ್ತನಿಂದುಂಟಾದ ಗುರುತುಗಳಾಗಿಯೂ ಅದ್ಭುತವಾಗಿಯೂ ಇಸ್ರಾಯೇಲರ ಮಧ್ಯದಲ್ಲಿದ್ದೇವೆ (ಯೆಶಾ. 8:18).

# ದೇವರಿಂದ ಹೊಸ ಆಶೀರ್ವಾದಗಳನ್ನು ಎದುರು ನೋಡುವುದು

ಕರ್ತನಾದ ಯೇಸು ಕ್ರಿಸ್ತನ ನಾಮದಲ್ಲಿ ಪ್ರಿಯ ವಾಚಕರೆಲ್ಲರಿಗೂ ವಂದನೆಗಳು ಹಾಗೂ ಹೊಸ ವರ್ಷದ ಶುಭಾಶಯಗಳು. ಹೊಸ ವರ್ಷದಲ್ಲಿ ಕರ್ತನ ಅನೇಕ ಆಶೀರ್ವಾವನ್ನು ಬಾಧ್ಯವಾಗಿ ಹೊಂದಿಕೊಳ್ಳಲು ಕರ್ತನು ಕೃಪೆತೋರಲಿ ಎಂದು ಪ್ರಾರ್ಥಿಸುತ್ತೇನೆ.

ಹೊಸ ವರ್ಷದಲ್ಲಿ ಆರ್ಶಿವಾದ ಪಡೆದುಕೊಳ್ಳಲು 10 ವಿಧವಾಗಿ ಕರ್ತನನ್ನು ಎದುರು ನೋಡೋಣ.

1. **ದೇವರ ದರ್ಶನವನ್ನು ಎದುರುನೋಡಬೇಕು. "ದೇವರೇ ನೀನೇ ನನ್ನ ದೇವರು ನಾನು ನಿನ್ನ ದರ್ಶನವನ್ನು ಕುತೂಹಲದಿಂದ ಎದುರುನೋಡುತ್ತೇನೆ. ನೀರಿಲ್ಲದೆ ಒಣಗಿದ ಭೂಮಿಯಲ್ಲಿದ್ದವನು ನೀರಿಗಾಗಿಯೋ ಎಂಬಂತೆ ನನ್ನ ಆತ್ಮವು ನಿನಗಾಗಿ ಆತುರಗೊಳ್ಳುತ್ತದೆ; ಶರೀರವು ಕುಂದಿಹೋಗುತ್ತದೆ"** (ಕೀರ್ತ. 63:1). ದೇವರ ದರ್ಶನವು ನಮ್ಮ ಜೀವಿತದಲ್ಲಿ ಪಾಪವನ್ನು ನೀಗಿಸಿ ಪರಿಶುದ್ದತೆಯನ್ನು ತರುವಂತದ್ದು, ಶಾಪವನ್ನು ನೀಗಿಸಿ ಆಶೀರ್ವಾದನ್ನು ತರುವಂತದ್ದು, ಬಂಧನವನ್ನು ನೀಗಿಸಿ ಬಿಡುಗಡೆಯನ್ನು ತರುವಂತದ್ದು, ಬಿದ್ದು ಹೋದ ಸ್ಥಿತಿಯನ್ನು ನೀಗಿಸಿ ಕರ್ತನಿಗಾಗಿ ಪ್ರಕಾಶಿಸುವಂತೆ ಮಾಡುವಂತದ್ದು, ಒಣ ಪರಿಸ್ಥಿತಿಯನ್ನು ನೀಗಿಸಿ ಉಜ್ಜೀವನವನ್ನು ತರುವಂತದ್ದು, ಆತ್ಮೀಕ ಬಂಜೆತನವನ್ನು ನೀಗಿಸಿ ಆತ್ಮೀಕ ಕೊಯ್ಯಲನ್ನು ತರುವಂತದ್ದು, ಯೆಶಾ 6:1 ಹೇಳುತ್ತದೆ ಉಜ್ಜೀಯನ ಕಾಲವಾದ ಮೇಲೆ ಯೆಶಾಯನು ಕರ್ತನ ದರ್ಶನವನ್ನು ಕಂಡನು. ಉಜ್ಜೀಯ ಎಂದರೆ ಅಹಂಕಾರ, ಹೆಮ್ಮೆ, ಸ್ವಪ್ರತಿಷ್ಠೆ, ಪಾಪ ಆಗಿರುತ್ತದೆ. ಇವೆಲ್ಲವು ನೀಗದೆ ದೇವರ ದರ್ಶನವನ್ನು ಹೊಂದಲು ಸಾಧ್ಯವಿಲ್ಲ., ನಿರ್ಮಲಚಿತ್ತರು ಧನ್ಯರು ಅವರು ದೇವರನ್ನು ನೋಡುವರು. (ಮತ್ತಾ 5:8) **"ಪರಿಶುದ್ಧತೆಯಿಲ್ಲದೆ ಯಾವನು ಕರ್ತನನ್ನು ಕಾಣುವುದಿಲ್ಲ"** (ಇಬ್ರಿಯ 12:15) ಆತ್ಮೀಕ ಜೀವಿತದಲ್ಲಿ ಮತ್ತು ಸೇವೆಯಲ್ಲಿ ಮುಂದುವರೆಯಲು ದೈವಿಕ ದರ್ಶನಬೇಕು. ದೇವದರ್ಶಕರಿಲ್ಲದಿರುವಲ್ಲಿ ಜನರು ಅಂಕೆಮೀರುವರು". (ಜ್ಞಾನೋ 29:18) ದೇವ ಮಗುವೇ ಈ ಹೊಸ ವರ್ಷದ ಆರಂಭದಲ್ಲಿ ನಿನ್ನಲ್ಲಿ ಒಂದು ಹೊಸ ದರ್ಶನ ಮೂಡಿಬರಲಿ ದೇವರಿಗಾಗಿ ನಾನು ಏನು ಮಾಡಬೇಕು? ಸೇವೆಯಲ್ಲಿ ಹೇಗೆ ಬೆಳೆಯಬೇಕು? ಮತ್ತು ಆತ್ಮೀಕ ಜೀವಿತದಲ್ಲಿ ನಾನು ಹೇಗೆ ವೃದ್ಧಿಯಾಗಬೇಕೆಂದು? ನಿನ್ನ ಹೃದಯದಲ್ಲಿ ಬರಲಿ. ಆಗ ನೀನು ಕರ್ತನಿಗಾಗಿ ಪ್ರಕಾಶಿಸುವೆ. ಹಳೆಒಡಂಬಡಿಕೆಯ ದೇವಜನರು ಈ ರೀತಿ ಪ್ರಾರ್ಥಿಸುತ್ತಿದ್ದರು. ಯೆಶಾ 64:1–4.....

2. ಒಮ್ಮೆ ಕಂಡ ದೇವರ ಮಹತ್ತು ಹಾಗೂ ಪ್ರಭಾವವನ್ನು ಪುನಃ ಕಾಣುವುದಕ್ಕೆ ಬಯಕೆ. ನಿನ್ನ ಮಂದಿರದಲ್ಲಿ ನಿನ್ನ ಮಹತ್ತನ್ನು ಪ್ರಭಾವವನ್ನು ಕಂಡ ಪ್ರಕಾರ ಈಗಲೂ ಕಾಣಬಯಸುತ್ತೇನೆ. (ಕೀರ್ತ63:2.)

ಕೆಲವರ ಜೀವಿತದಲ್ಲಿ ಉತ್ತಮ ಹಾಗೂ ಶಕ್ತವಾದ ಸಾಕ್ಷಿಗಳಿವೆ. ರಕ್ಷಣೆ ಹೊಂದಿದ ದಿವಸಗಳಲ್ಲಿ ಅನೇಕರಿಗೆ ಸುವಾರ್ತೆ ಸಾರಿದ್ದೇನೆ, ಅನೇಕರಿಗೆ ಪ್ರಾರ್ಥಿಸುವಾಗ ಕರ್ತನು ಆದ್ಭುತ ಮಾಡಿದ್ದಾನೆ ಪರಿಶುದ್ಧವಾಗಿ ಜೀವಿಸಿದ್ದೇನೆ ಯಾವುದೋ ಒಂದು ಕಾರಣಕ್ಕಾಗಿ ಇಂದು ಆ ಮಹಿಮೆ ಮತ್ತು ಅದ್ಭುತ ಕೃತ್ಯಗಳನ್ನು ಕಾಣಲು ಆಗುತ್ತಾ ಇಲ್ಲ. ಫಿಲಿಷ್ಟಿಯರಿಗೂ ಮತ್ತು ಇಸ್ರಾಯೇಲರ ಮಧ್ಯೆ ಯುದ್ಧ ನಡೆದಾಗ ಏಲಿಯ ಮಕ್ಕಳಿಬ್ಬರು ಯುದ್ಧದಲ್ಲಿ ಸತ್ತು ಹೋದರು. (1ಸಮು 4;17) ಮತ್ತು ಯಾಜಕನಾದ ಏಲಿಯೂ ಸತ್ತು ಹೋದನು. ಫೀನೆಹಾಸನ ಹೆಂಡತಿಯು ಗರ್ಭಿಣಿಯಾಗಿದ್ದು ಒಂದು ಮಗುವಿಗೆ ಜನ್ಮ ಕೊಟ್ಟಳು. ಆ ಮಗುವಿಗೆ "ಈಕಾಬೋದ್" ಎಂದು ಹೆಸರಿಟ್ಟಳು. (1ಸಮು4;21,22,) ಈಕಾಬೋದ್ ಎಂದರೆ "ಮಹಿಮೆಯು ಬಿಟ್ಟು ಹೋಯಿತು" ಇಂದು ಯಾವುದೋ ಒಂದು ಕಾರಣದಿಂದ ದೇವರ ಮಹಿಮೆಯನ್ನು ಕಳೆದುಕೊಂಡಿರಬಹುದು. ಆದರೆ ಮಾನಸಾಂತರ ಹೊಂದಿ ನೀನು ದೇವರ ಬಳಿಗೆ ಬರುವುದಾದರೆ ದೇವರು ಅದನ್ನು ನಿನಗೆ ಕೊಡಲು ಇಷ್ಟವುಳ್ಳವನಾಗಿದ್ದಾನೆ.

3. **ದೇವರನ್ನು ಸ್ತುತಿಸುವುದು: "ನಿನ್ನ ಪ್ರೇಮಾನುಭವವು ಜೀವಕ್ಕಿಂತಲೂ ಶ್ರೇಷ್ಠ ನನ್ನ ಬಾಯಿ ನಿನ್ನನ್ನು ಕೀರ್ತಿಸುವುದು ನನ್ನ ಜೀವಮಾನದೆಲ್ಲೆಲ್ಲಾ ಹೀಗೆಯೇ ನಿನ್ನನ್ನು ಹಾಡಿ ಹರಸುತ್ತಾ ನಿನ್ನ ಹೆಸರೆತ್ತಿ ಕೈ ಮುಗಿಯುವೆನು"**. (ಕೀರ್ತ 63:3–4) ದಾವೀದನು ದೇವರ ಪ್ರೇಮಾನುಭವವನ್ನು ಸವಿದಿದ್ದನು. ದೇವರು ತನ್ನನ್ನು ಪ್ರೀತಿಸುವದನ್ನು ಅನುಭವದಿಂದ ಅರಿತಿದ್ದನು. ಆ ಪ್ರೀತಿಯನ್ನು ರುಚಿಸಿ ನೋಡಿದಂತಹ ದಾವೀದನಿಗೆ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಾಗಲಿಲ್ಲ. ಅದಕ್ಕೆ ಕೀರ್ತ 34:1 ರಲ್ಲಿ "ನಾನು ಯೆಹೋವನನ್ನು ಎಡಬಿಡದೆ ಕೊಂಡಾಡುವೆನು ಆತನ ಸ್ತೋತ್ರವು ಯಾವಾಗಲೂ ನನ್ನ ಬಾಯಲ್ಲಿ ಇರುವದು", ಪುನಃ ದಾವೀದನು ಮುಂದುವರೆದು ಕೀರ್ತನೆ 34:8 ರಲ್ಲಿ ಯೆಹೋವನು ಸರ್ವೋತ್ತಮನೆಂದು ಅನುಭವ ಸವಿದು ನೋಡಿರಿ ಆತನನ್ನು ಆಶ್ರಯಿಸಿಕೊಂಡವರು ಎಷ್ಟೋ ಧನ್ಯರು" ದೇವರು ನಮ್ಮನ್ನು ಪ್ರೀತಿಸುತ್ತಾನೆ. ಕೆಲವು ಸಂದರ್ಭದಲ್ಲಿ ನೋವುಗಳ ಮೂಲಕ, ಬಾಧೆಗಳ ಮೂಲಕ, ವಿವಿಧ ಸಮಸ್ಯೆಗಳ ಮೂಲಕ, ನಮ್ಮನ್ನು ಮುರಿದು ಯೋಗ್ಯ ಸ್ಥಿತಿಗೆ ತರುವಂತದ್ದಾಗಿದೆ. "ಕ್ರಿಸ್ತನಲ್ಲಿ ನಿಮ್ಮನ್ನು ತನ್ನ ನಿತ್ಯಪ್ರಭಾವಕ್ಕೆ

ಶಕ್ತನಾಗಿರುವಾತನು ಮಹಿಮೆಯಾದವುಗಳನ್ನು ನನಗೆ ಮಾಡಿದನು. ಆತನ ನಾಮವು ಪರಿಶುದ್ಧವುಳ್ಳದ್ದು (ಲೂಕ. 1:49).

ಕರೆದ ದೇವರು ತಾನೇ ನೀವು ಸ್ವಲ್ಪಕಾಲ ಬಾಧೆಪಟ್ಟ ಮೇಲೆ ನಿಮ್ಮನ್ನು ಯೋಗ್ಯ ಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು (1ಪೇತ್ರ 5:10). ಪ್ರತಿಯೊಂದು ಸ್ಥಿತಿಯಲ್ಲಿ ಕರ್ತನನ್ನು ಸ್ತುತಿಸಿರಿ (ಯೋಬ 1:21, ಅಪೋ 16:25,26. 1ಥೆಸ. 5;17,18. ಫಿಲಿ. 4;6,7).

4. **ದೇವರನ್ನು ಸ್ಮರಿಸಿ ಧ್ಯಾನಿಸುವದು: "ನಾನು ಹಾಸಿಗೆಯ ಮೇಲಿದ್ದುಕೊಂಡು ನಿನ್ನನ್ನು ಸ್ಮರಿಸುವಾಗ ರಾತ್ರಿಯ ಜಾವಗಳಲ್ಲಿ ನಿನ್ನನ್ನು ಧ್ಯಾನಿಸುತ್ತಿರುವೆನು"** (ಕೀರ್ತ 63:6). ದೇವರ ವಾಕ್ಯ ಕೇಳುತ್ತದೆ, ವಿಮೋ 20;24 ನಾನು ನನ್ನ ಹೆಸರನ್ನು ನಿಮ್ಮ ನೆನಪಿಗೆ ಬರಮಾಡುವ ಎಲ್ಲಾ ಸ್ಥಳಗಳಲ್ಲಿಯೂ ನಿಮ್ಮ ಬಳಿಗೆ ಬಂದು ನಿಮ್ಮನ್ನು ಆಶೀರ್ವದಿಸುವೆನು. ರಾತ್ರಿ ಹಗಲು ದೇವರ ಸ್ಮರಣೆಯನ್ನು ಮಾಡಬೇಕೆಂದು ದೇವರ ಬಯಕೆಯಾಗಿದೆ. ಯಾರು ಸ್ಮರಿಸುತ್ತಾರೋ ಅವರು ಜಯದೊಂದಿಗೆ ಜೀವನ ಮಾಡುತ್ತಾರೆ. ಕಾರಣ ಯೇಸು ಕ್ರಿಸ್ತನು ಮರಣವನ್ನು, ಪಾತಾಳವನ್ನು, ಪಾಪವನ್ನು, ಶಾಪವನ್ನು, ಲೋಕವನ್ನು ಜಯಿಸಿದನು. ಇಬ್ರಿ 12; 1–2 ಹೇಳುತ್ತದೆ, ಆದಕಾರಣ ಇಷ್ಟುಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲು ಇರುವದದಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನು ಹತ್ತಿಕೊಳ್ಳುವ ಪಾಪವನ್ನೂ ನಾವು ಸಹ ತೆಗೆದಿಟ್ಟು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. ನಮ್ಮ ಸೋಲುಗಳು, ನೋವುಗಳು, ದುಃಖಗಳು, ಬಾಧೆಗಳು, ಅವಮಾನಗಳು, ಬಲಹೀನತೆಗಳು ಇವುಗಳನ್ನು ಸ್ಮರಿಸದೆ ಜಯಹೊಂದಿದ ಕರ್ತನನ್ನು ಸ್ಮರಿಸೋಣ. ಆಗ ಜಯದ ಜೀವಿತವನ್ನು ಜೀವಿಸಲು ಸಾಧ್ಯ. **"ಆದುದರಿಂದ ದೇವ ಜನರಾದ ಸಹೋದರರೇ ಪರಲೋಕ ಸ್ವಾಸ್ಥ್ಯಕ್ಕಾಗಿ ನನ್ನೊಂದಿಗೆ ಕರೆಯಲ್ಪಟ್ಟವರೇ, ನಾವು ಪ್ರತಿಜ್ಞೆಮಾಡಿ ಒಪ್ಪಿಕೊಂಡಿರುವ ದೇವಪ್ರೇಷಿತನೂ ಮಹಾಯಾಜಕನೂ ಆಗಿರುವ ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಿರಿ"**. (ಇಬ್ರಿ 3:1).

5. ದೇವರು ನಮ್ಮ ಸಹಾಯಕನು ಮತ್ತು ಆಶ್ರಯಗಿರಿಯೂ ಆಗಿದ್ದಾನೆ. ಕೀರ್ತ 63:7
6. ಕರ್ತನನ್ನು ನಮ್ಮ ಆತ್ಮವೂ ಅಂಟಿಕೊಂಡು ಹಿಂಬಾಲಿಸಬೇಕು. ಕೀರ್ತ 63:8
7. ದೇವರ ಬಲಗೈ ನಮಗೆ ಆಧಾರವಾಗಿರುತ್ತದೆ. ಕೀರ್ತ 63:8
8. ವೈರಿಗಳ ಮುಂದೆ ದೇವರು ನಮಗೆ ಔತಣವನ್ನು ಸಿದ್ಧಪಡಿಸುವನು. ಕೀರ್ತ 63:9,10
9. ದೇವರಲ್ಲಿ ಲೋಕದ ರಾಜರಾದ ನಾವು ಆನಂದಿಸುವೆವು. (1ಪೇತ್ರ 2:9,10. ಪ್ರಕಟಣೆ 5:10) ಕೀರ್ತ 63:11
10. ಸುಳ್ಳುಬಾಯಿಗಳು ಮುಚ್ಚಿಹೋಗವದನ್ನು ಕಂಡು ದೇವ ಜನರು ಹಿಗ್ಗುವರು. ಕೀರ್ತ 63:11 (ದಾನಿ 6:1–4,

ಆದಿ 39:7–11, ಎಸ್ತೇರ, ಮೊರ್ದೆಕೈ, ಹಾಮಾನ್).

ದೇವರು ನಿಮ್ಮನ್ನು ಆಶೀರ್ವದಿಸಲಿ.

**– ಪಾ|| ಸುನಿಲ್ ಜಾನ್ ಡಿ'ಸೋಜಾ.**


## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಚಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**


ನನ್ನನ್ನು ಉನ್ನತವಾದ ಪ್ರದೇಶಗಳಲ್ಲಿ ನಡಿಸುತ್ತಾನೆ

(ಹಬ. 3:19).

# ಯೌವನಸ್ಥರ ಸ್ವರ ಪವಿತ್ರಾತ್ಮನೊಂದಿಗೆ ನಡೆ

ಮುಂದುವರೆದ ಭಾಗ..

ನಮ್ಮ ಕರ್ತನೂ ಒಡೆಯನೂ ರಕ್ಷಕನೂ ಆದ ಯೇಸು ಕಿಸ್ತನ ನಾಮದಲ್ಲಿ ದೇವರ ಸ್ವರ ಮಾಸಪತ್ರಿಕೆಯ ಎಲ್ಲ ಚಂದಾದಾರರಿಗೂ ಹಾಗೂ ಓದುಗರಿಗೂ ನನ್ನ ಪ್ರೀತಿಯ ವಂದನೆಗಳು ಮತ್ತು 2014 – ನೂತನ ವರ್ಷದ ಶುಭಾಷಯಗಳು.

ನಾವು ಈಗಾಗಲೇ 2013ರನ್ನು ಕಳೆದು ನೂತನ ವರ್ಷವನ್ನು ಪ್ರವೇಶಿಸಿದ್ದೇವೆ. ಅನೇಕ ಬಾರಿ ನಾವು ನೂತನ ವರ್ಷದಲ್ಲಿ ಅನೇಕ ತೀರ್ಮಾನಗಳನ್ನು ತೆಗೆದುಕೊಳ್ಳುವುದುಂಟು. ಆದರೆ ವರ್ಷಾಂತ್ಯದಲ್ಲಿ ನಾವು ಅದನ್ನು ಒಮ್ಮೆ ಹಿಂದಿರುಗಿ ನೋಡುವುದಾದರೆ, ನಮ್ಮ ಅನೇಕ ತೀರ್ಮಾನಗಳಲ್ಲಿ ಏನನ್ನು ಸಾಧಿಸಲಾರದೇ ಮತ್ತೆ ಸೋತುಹೋಗಿರುತ್ತೇವೆ ಮತ್ತು ಏನೂ ಮಾಡಲಿಕ್ಕೆ ಆಗದೇ ಇರುವುದಕ್ಕಾಗಿ ನಮಗೆ ನಾವೇ ಬೇಸರಪಡುತ್ತೇವೆ. ಇದಕ್ಕೆ ಕಾರಣ ನಾವು ಪವಿತ್ರಾತ್ಮನೊಂದಿಗೆ ನಡೆಯದೆ, ಆತನ ಆಲೋಚನೆ, ಆತನ ಮಾತು, ಆತನ ಚಿತ್ತವನ್ನು ಗ್ರಹಿಸದೇ ನಮ್ಮದೇ ಸ್ವಂತ ತೀರ್ಮಾನಗಳನ್ನು, ನಮ್ಮದೇ ಸ್ವಂತ ಮಾರ್ಗಗಳನ್ನು ಆರಿಸಿಕೊಳ್ಳುವುದರಿಂದಲೇ ಆಗಿದೆ.

ಈ ಸಂಚಿಕೆಯಲ್ಲಿ ಕೆಲವು ಸಂಗತಿಯನ್ನು ಕಲಿಯುವ ಮೊದಲು ಪ್ರಾರ್ಥನೆಯನ್ನು ಮಾಡೋಣ. ಸತ್ಯವನ್ನು ಕಲಿಸುವ ಪವಿತ್ರಾತ್ಮನೇ, ನಾನು ನಿಮ್ಮೊಂದಿಗೆ ವಾಕ್ಯದ ಸತ್ಯವನ್ನು ಕಲಿಯುವುದಕ್ಕೆ ಬಯಸುತ್ತೇನೆ. ನನಗೆ ಕಲಿಸಿಕೊಡಿ ಎಂಬುದಾಗಿ ಯೇಸುಕ್ರಿಸ್ತನ ನಾಮದಲ್ಲಿ ಕೇಳಿಕೊಳ್ಳುತ್ತೇನೆ.

ಪವಿತ್ರಾತ್ಮನ ಮಾತನ್ನು ಕೇಳುವವರಾಗಿರಬೇಕು – ಅಪೊ 13:2ರಲ್ಲಿ ಅಂತಿಯೋಕ್ಯ ಸಭೆಯ ಪ್ರವಾದಿಗಳೂ ಭೋಧಕರೂ ಕರ್ತನನ್ನು ಸೇವಿಸುತ್ತಾ ಉಪವಾಸಮಾಡುತ್ತಾ ಇದ್ದಾಗ ಪವಿತ್ರಾತ್ಮನು – ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು. ಆಗ ಅವರು ಪ್ರಾರ್ಥನೆ ಮಾಡಿ ಆ ಇಬ್ಬರ ಮೇಲೆ ಹಸ್ತಾರ್ಪಣಮಾಡಿ ಅವರನ್ನು ಕಳುಹಿಸಿಕೊಟ್ಟರು.

ಆದಿ ಅಪೊಸ್ತಲರ ಕಾಲದ ಸಭೆಯಲ್ಲಿ ಸೇವಕರು ಪ್ರಾರ್ಥಿಸುತ್ತಿದ್ದ ವೇಳೆಯಲ್ಲಿ ಪವಿತ್ರಾತ್ಮನು ಅವರ ಸಂಗಡ ಮಾತಾಡುವುದನ್ನು ಕೇಳುವುದಕ್ಕೆ ಸಾಧ್ಯವಾಗುತ್ತದೆ. ಅನೇಕರು ಈ ದಿನಗಳಲ್ಲಿ ಪವಿತ್ರಾತ್ಮನು ಮಾತನಾಡಿದನು ಎಂಬುದಾಗಿ ಹೇಳುತ್ತಾರೆ. ಆದರೆ ಅವರು ಮಾಡುವ ಕೆಲಸಗಳಲ್ಲಿ ಅಥವಾ ಸೇವೆಗಳಲ್ಲಿ ಸಮಾಧಾನವಾಗಲೀ ಸಂತೋಷವಾಗಲೀ ಶಾಶ್ವತವಾಗಿ ನಿಲ್ಲುವ ಫಲವನ್ನಾಗಲೀ ನೋಡಲು ಸಾಧ್ಯವಿಲ್ಲವಾಗಿದೆ. ಬೈಬಲ್ 1ಕೊರಿಂಥ 14:33 ರಲ್ಲಿ ಹೇಳುವ ಪ್ರಕಾರ, ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ.

ಪವಿತ್ರಾತ್ಮನು ಯಾವುದನ್ನೇ ಹೇಳುವುದಾದರೂ, ಅದು ತಂದೆಯಾದ ದೇವರ ಚಿತ್ತನುಸಾರವಾಗಿರುವುದು. ಇಂದು ಅನೇಕ ವೇಳೆಗಳಲ್ಲಿ ನಮ್ಮ ತಪ್ಪು ಕಲ್ಪನೆಯಿಂದ ಅಥವಾ ಗ್ರಹಿಕೆಯಿಂದ ಅಥವಾ ಲೆಕ್ಕಚಾರದಿಂದ ಬರುವಂತಹ ಅನಿಸಿಕೆಗಳನ್ನು ಮತ್ತು ಆಲೋಚನೆಗಳನ್ನು ಪವಿತ್ರಾತ್ಮನು ಮಾತನಾಡಿದನು ಎಂಬುದಾಗಿ ಹೇಳಿ ಮೋಸಹೋಗುವ ಸಾಧ್ಯತೆಯಿದೆ. ಇದನ್ನು ನಾನು ಇದನ್ನು ಓದುತ್ತಿರುವ ಎಲ್ಲ ಯೌವನಸ್ಥರಿಗೆ ಮತ್ತು ಕರ್ತನ ಸೇವೆಯಲ್ಲಿ ಮೇಲೆ ಬರುತ್ತಿರುವ ಎಲ್ಲ ದೇವ ಸೇವಕರಿಗೆ ವಿನಯತೆಯಿಂದಲೂ ನಮ್ರತೆಯಿಂದಲೂ ಹೇಳುತ್ತಿದ್ದೇನೆಯೇ ಹೊರತು ತಪ್ಪು ಹೊರಿಸುವುದಕ್ಕಾಗಿಯಲ್ಲ. ನಾವೆಲ್ಲರೂ ಎಡವುದುಂಟು ಮತ್ತು ಅನೇಕ ಬಾರಿ ತಪ್ಪು ಮಾಡುವುದುಂಟು. ನಮ್ಮ ದೇವರಾದರೋ ಆತನ ಬಳಿ ನಾವು ಪಶ್ಚಾತಾಪದೊಂದಿಗೆ ಮತ್ತು ಮನಸಾಂತರದೊಂದಿಗೆ ಹೋಗುವುದಾದರೆ ಆತನು ಮತ್ತೇ ನಮ್ಮನ್ನು ನಡೆಸಲು ಸಿದ್ದನಾಗಿದ್ದಾನೆ. ಅದನ್ನೇ ನಾವು ಕೀರ್ತನೆ 32:8ರಲ್ಲಿ ನೋಡುವುದಕ್ಕೆ ಸಾಧ್ಯವಿದೆ. ನಿನ್ನನ್ನು ಉಪದೇಶಿಸಿ ನಡೆಯಬೇಕಾದ ಮಾರ್ಗವನ್ನು ತಿಳಿಸುವೆನು; ನಿನ್ನನ್ನು ಕಟಾಕ್ಷಿಸಿ ಆಲೋಚನೆಹೇಳುವೆನು. ಆದರೆ 32:9ನ್ನು ಗಮನಿಸುವುದಾದರೆ, ಆದದರಿಂದ ನೀವು ವಿವೇಕಹೀನರಾಗಿ ಕುದುರೆಯಂತಾಗಲಿ, ಹೇಸರಕತ್ತೆಯಂತಾಗಲಿ ಇರಬೇಡಿರಿ; ಅವುಗಳು ಬಾರುಕಡಿವಾಣ ಗಳಿಂದಲ್ಲದೆ ಸ್ವಾಧೀನವಾಗುವದಿಲ್ಲವಷ್ಟೆ. ದಯವಿಟ್ಟು ನನಗಾಗಿ, ನನ್ನ ಕುಟುಂಬಕ್ಕಾಗಿ ಮತ್ತು ಸೇವೆಗಾಗಿ ನಿಮ್ಮ ಪ್ರಾರ್ಥನೆಯಲ್ಲಿ ಕರ್ತನ ಬಳಿ ಪ್ರಾರ್ಥಿಸಿರಿ. ನಿಮ್ಮ ಸಲಹೆಗಳನ್ನು ಮತ್ತು ಕರ್ತನು ನಿಮ್ಮೊಂದಿಗೆ ಮಾತನಾಡಿರುವುದನನ್ನು ತಪ್ಪದೇ ನನಗೆ ಬರೆದು ಕಳುಹಿಸಿ. ನನ್ನ ಇ–ಮೇಲ್: jsma2j@gmail.com. ಕರ್ತನು ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ. ಫೇಸ್‌ಬುಕ್(facebook) ನಲ್ಲಿ ಹಿಂಬಾಲಿಸಲು www.facebook.com/jsmonteiro ಕ್ಲಿಕ್ ಮಾಡಿರಿ. ನಮ್ಮ ಬೆಂಗಳೂರು ಸಭೆಯ ಅಂತರ್ಜಾಲ www.dgmbengaluru.org ಸಂಪರ್ಕಿಸಿ.

ದೇವರು ನಿಮ್ಮನ್ನು ಆಶೀರ್ವದಿಸಲಿ.

ವಿಶೇಷವಾಗಿ ಸತ್ಯವೇದ ವಾಹಿನಿಯಲ್ಲಿ ಪ್ರತಿ ಸೋಮವಾರ ರಾತ್ರಿ 8 ರಿಂದ 8.30ರವರೆಗೆ ಪ್ರಸಾರವಾಗುವ "ಜೀವಜಲ" (Living Water in Satyaveda TV on Every Monday at 8-8.30p.m.) ಕಾರ್ಯಕ್ರಮವನ್ನು ವೀಕ್ಷಿಸಿ ಮತ್ತು ಇತರರಿಗೆ ತಿಳಿಯಪಡಿಸಿರಿ.

ಮುಂದುವರಿಯುವದು....

ಕರ್ತನಾದ ಯೇಸುಕ್ರಿಸ್ತನಲ್ಲಿ ನಿಮ್ಮವ

**– ಸಭಾ॥ ಜಾನ್ ಸ್ಟೀಫನ್ ಮೊಂತೆರೋ**

ಡಿ.ಜಿ.ಎಂ – ಬೆತೇಲ್, ಬೆಂಗಳೂರು.

ಕ್ರಿಸ್ತೇಸು ನನ್ನ ದೇವ ಬಲವೂ ದೇವಜ್ಞಾನವೂ ಆಗುವನು

(1 ಕೊರಿ. 1:34).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

9) **ಸ್ತುತಿಯು ಕರ್ತನಿಗೆ ಪ್ರಿಯವಾದದ್ದು: "ನಾನು ಸಂಕೀರ್ತಿಸುತ್ತಾ ದೇವರ ನಾಮವನ್ನು ಕೊಂಡಾಡುವೆನು. ಕೃತಜ್ಞತಾ ಸ್ತುತಿಯಿಂದ ಘನಪಡಿಸುವೆನು ಇದು ಯೆಹೋವನಿಗೆ ಕೊಂಬುಗೊರಸುಗಳುಳ್ಳ ಎಳೇ ಹೋರಿಗಳ ಯಜ್ಞಕ್ಕಿಂತ ಬಹುಪ್ರಿಯವಾದದ್ದು"** (ಕೀರ್ತ. 69:30–31).

10) **ಆತನು ನಮ್ಮ ಜೀವಿತದಲ್ಲಿ ಒಳ್ಳೆಯವನಾಗಿರುವ ಕಾರಣ: "ಯೆಹೋವನಿಗೆ ಕೃತಜ್ಞತ್ತಾ ಸ್ತುತಿ ಮಾಡಿರಿ. ಆತನು ಒಳ್ಳೆಯವನು ಆತನ ಕೃಪೆಯು ಶಾಶ್ವತವು"** (ಕೀರ್ತ. 118:1).

4) **ಜರತಾರಿ ವಸ್ತ್ರ: "ಅಂತಪುರದಲ್ಲಿ ರಾಜಕುಮಾರಿಯು ಎಷ್ಟೋ ವೈಭವದಿಂದಿದ್ದಾಳೆ. ಆಕೆಯು ಜರತಾರಿಯ ವಸ್ತ್ರವನ್ನು ಧರಿಸಿಕೊಂಡಿದ್ದಾಳೆ"** (ಕೀರ್ತ. 45:13). ಇದು ದೇವರು ನಮ್ಮನ್ನು ಉಡಿಸಿ ತೊಡಿಸುವ ಕುರಿತು ಮಾತನಾಡುತ್ತದೆ. ಜರತಾರಿಯ ವಸ್ತ್ರವನ್ನು ಹೋಲಿಯುವಾಗ ಸೂಜಿಯು ಅನೇಕ ಸಲ ಚುಚ್ಚಿ ತೆಗೆಯಬೇಕಾಗುತ್ತದೆ. ಹಾಗೆಯೇ ಅನೇಕ ಸಲ ಸೂಜಿಯಿಂದ ಚುಚ್ಚಿ ಸಿದ್ಧಮಾಡಿದ ಜರತಾರಿ ವಸ್ತ್ರ ತುಂಬಾ ಸುಂದರವಾಗಿ ಕಾಣುತ್ತದೆ. ಒಬ್ಬ ಕ್ರೈಸ್ತ ವಿಶ್ವಾಸಿಯ ಜೀವಿತದಲ್ಲಿ ನೋವು ಮತ್ತು ಭಾದೆಗಳೆಂಬ ಸೂಜಿಗಳು ಇದ್ದೇ ಇರುತ್ತದೆ. ಕೊನೆಗೆ ಕರ್ತನು ನಮ್ಮನ್ನು ನೋವು ಭಾದೆಗಳ ಮೂಲಕ ಸುಂದರವಾಗಿ ಜರತಾರಿಯ ವಸ್ತ್ರದೊಂದಿಗೆ ಸಿದ್ಧಪಡಿಸುತ್ತಾನೆ. "ದೇವರಿಗೂ ಕರ್ತನಾದ ಯೇಸುಕ್ರಿಸ್ತನಿಗೂ ದಾಸನಾಗಿರುವ ಯಾಕೋಬನು ಅನ್ಯದೇಶಗಳಲ್ಲಿ ಚದರಿರುವ ಇಸ್ರಾಯೇಲ್ ಹನ್ನೆರಡು ಕುಲಗಳಿಗೆ ಬರೆಯುವುದು ನಿಮಗೆ ಶುಭವಾಗಲಿ. ನನ್ನ ಸಹೋದರರೇ ನಿಮ್ಮ ನಂಬಿಕೆಗೆ ಆಗುವ ಪರಿಶೋಧನೆಯ ತಾಳ್ಮೆಯನ್ನುಂಟು ಮಾಡುತ್ತದೆಂದು ತಿಳಿದು ನೀವು ನಾನಾ ವಿಧವಾದ ಕಷ್ಟಗಳಲ್ಲಿ ಬಿದ್ದಿರುವಾಗ ಅದನ್ನು ಕೇವಲ ಆನಂದಕರವಾದದ್ದೆಂದು ಎಣಿಸಿರಿ. ಆ ತಾಳ್ಮೆಯು ಸಿದ್ಧಿಗೆ ಬರಲಿ. ಆಗ ನೀವು ಶಿಕ್ಷಿತರೂ ಸರ್ವ ಸುಗುಣವುಳ್ಳವರೂ ಏನೂ ಕಡಿಮೆಯಿಲ್ಲದವರೂ ಆಗಿರುವಿರಿ (ಯಾಕೋ. 1:1–4). "ಸಮಸ್ತವು ಯಾವನಿಗೋಸ್ಕರವೂ ಯಾವನಿಂದಲೂ ಉಂಟಾಯಿತೋ ಆತನು ಬಹು ಮಂದಿ ಪುತ್ರರನ್ನು ಪ್ರಭಾವಕ್ಕೆ ಸೇರಿಸುವಲ್ಲಿ ಅವರ ರಕ್ಷಣಾ ಕರ್ತನನ್ನು ಭಾದೆಗಳ ಮೂಲಕ ಸಿದ್ಧಿಗೆ ತರುವುದು ಆತನಿಗೆ ಯುಕ್ತವಾಗಿತ್ತು (ಇಬ್ರಿ. 2:10).

5) ಪ್ರಕಾಶಮಾನವೂ ನಿರ್ಮಲವೂ ಆದ ನಯವಾದ ನಾರುಮಡಿಯನ್ನು ಧರಿಸಿಕೊಳ್ಳುವುದಕ್ಕೆ ಆಕೆಗೆ ಅನುಗ್ರಹಿಸೋಣವಾಗಿತ್ತು. ಆ ನಾರುಮಡಿ ಅಂದರೆ ದೇವ ಜನರ ಸತ್ಕಾರ್ಯಗಳೇ. ಸತ್ಕಾರ್ಯಗಳು ಅಂದರೆ ಒಳ್ಳೆ ಕಾರ್ಯಗಳು, ದಾನಧರ್ಮ ಮಾಡುವುದು, ದಿಕ್ಕಿಲ್ಲದವರನ್ನು ಪರಾಂಬರಿಸುವುದು, ಅನಾಥರನ್ನು ಸಾಕುವುದು ಇತ್ಯಾದಿ.

6) ಆಕೆಯು ಬೂಟೆಧಾರಿ ಕಸೂತಿ ಕೆಲಸದ ವಸ್ತ್ರಗಳನ್ನು ಧರಿಸಿಕೊಂಡು ಸಖಿಯರಾದ ಕನ್ಯೆಯರ ಪರಿವಾರದೊಡನೆ ಅರಸನ ಬಳಿಗೆ ಬರುವಳು (ಕೀರ್ತ. 45:14). ನಾವು ಅರಸನಾದ ಯೇಸುಕ್ರಿಸ್ತನ ಬಳಿಗೆ ಬರುವಾಗ ಕಸೂತಿ ವಸ್ತ್ರಗಳೆಂಬ ಸೌಂದರ್ಯದೊಂದಿಗೆ ಬರಬೇಕು.

7) "ಜಯಶಾಲಿಗೆ ಹೀಗೆ ಶುಭವಸ್ತ್ರಗಳನ್ನು ಹೊದಿಸುವರು. ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿಬಿಡದೆ ಅವನು ನನ್ನವನೆಂದು ನನ್ನ ತಂದೆಯ ಮುಂದೆಯೂ ಆತನ ದೂತರ ಮುಂದೆಯೂ ಒಪ್ಪುವೆನು. (ಪ್ರಕ. 3:5). ನಾವು ಈ ಲೋಕದ ಮೇಲೆ, ಪಾಪದ ಮೇಲೆ, ಶರೀರದ ಮೇಲೆ, ಜಯ ಹೊಂದಿದರೆ ಕರ್ತನು ನಮ್ಮ ಅಂಗೀಕರಿಸುವುದು ಮಾತ್ರವಲ್ಲದೆ ಶುಭ್ರವಸ್ತ್ರಗಳಿಂದ ಅಲಂಕರಿಸುತ್ತಾನೆ. ಬಿಳಿ ಶುಭ್ರ ಪರಿಶುದ್ಧತೆಗೆ ಗುರುತಾಗಿದೆ.

8) **"ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ"** (ಗಲಾ. 3:27). ಆ ಮೇಲೆ ಅವರು ಪೂರಾ ಒಂದು ವರುಷ ಸಭೆಯವರ ಸಂಗಡ ಕೂಡಿದ್ದು ಬಹು ಜನರಿಗೆ ಉಪದೇಶ ಮಾಡಿದರು.

ನನ್ನನ್ನು ಬಲಪಡಿಸುವ ನಮ್ಮ ಕರ್ತನಾಗಿರುವ ಯೇಸುಕ್ರಿಸ್ತನು ನನ್ನನ್ನು ನೀತಿವಂತನೆಂದು ನಿರ್ಣಯಿಸಿದನು (1 ತಿಮೊ. 1:12).

ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು (ಅ.ಕೃ. 11:26).

ಕ್ರೈಸ್ತ ಅಂದರೆ ಯಾರೊಳಗೆ ಕ್ರಿಸ್ತನು ಇದ್ದಾನೋ ಅವನು ಕ್ರೈಸ್ತನು. ಇಂದು ಅನೇಕರು ಅನೇಕ ವಿಧವಿಧವಾದ ಬಟ್ಟೆಗಳನ್ನು ಧರಿಸಬಹುದು ಆದರೆ ಪ್ರಶ್ನೆ ಏನೆಂದರೆ ಕ್ರಿಸ್ತನನ್ನು ನೀನು ಧರಿಸಿರುವೆಯಾ? "ನ್ಯಾಯತೀರ್ಪಿನ ದಿನದಲ್ಲಿ ನಮಗಿರುವ ಧೈಯದಲ್ಲಿಯೇ ಆತನ ಪ್ರೀತಿಯು ನಮ್ಮೊಳಗೆ ಸಿದ್ಧಿಗೆ ಬಂತು. ಯಾಕೆಂದರೆ ಕ್ರಿಸ್ತನು ಎಂಥವನಾಗಿದ್ದಾನೋ ನಾವು ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ.

9) **"ಹೀಗಿರಲಾಗಿ ನೀವು ದೇವರಿಂದ ಆರಿಸಿಕೊಂಡವರೂ, ಪ್ರತಿಷ್ಠಿತರೂ, ಪ್ರಿಯರೂ ಆಗಿರುವುದರಿಂದ ಕನಿಕರ ದಯೆ ದೀನಭಾವ ಸಾತ್ವಿಕತ್ವ ದೀರ್ಘಶಾಂತಿ ಎಂಬ ಸದ್ಗುಣಗಳನ್ನು ಧರಿಸಿಕೊಳ್ಳಿರಿ** (ಕೊಲೊ. 3:12). ಅನೇಕರಲ್ಲಿ ವರಗಳು ಇರಬಹುದು ಫಲಗಳು ಇಲ್ಲದಿದ್ದಲ್ಲಿ ನಿಜವಾದ ಕ್ರೈಸ್ತರಾಗಿ ನಾವು ಜೀವಿಸಲು ಸಾಧ್ಯವಿಲ್ಲ. ವರಗಳು ಕ್ರಿಸ್ತನ ಶಕ್ತಿಯನ್ನು, ಫಲಗಳು ಕ್ರಿಸ್ತನ ಸ್ವಭಾವವನ್ನು ಪ್ರಕಟಿಸುತ್ತವೆ.

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**


## ದೇವರ ಸ್ವರ ಮಾಸಪತ್ರಿಕೆಯ ಪರಿಷ್ಕರಿಸಲ್ಪಟ್ಟ ಜಾಹೀರಾತಿನ ದರಗಳು

| | | |
|---|---|---|
| Back Page Colour (Full) | : | 5,000/- |
| Front Inner Page Colour (Full) | : | 3,500/- |
| Back Inner Page Colour (Full) | : | 2,500/- |
| Inside B/W (Full Page) | : | 800/- |

**ಆಶ್ರಮದ ಅವಶ್ಯಕತೆಗಳು**

1. 30 ಟೇಬಲ್
2. 60 ಬೆಂಚ್
3. ಟೆಂಪೋ ಟ್ರಾವಲ್ಸ್
4. ಅಕ್ಕಿ, ಸಕ್ಕರೆ, ದವಸಧಾನ್ಯ
5. 50 ಮಂಚ
6. 50 ಹಾಸಿಗೆ
7. 50 ದಿಂಬು
8. 50 ಬೆಡ್ ಶೀಟ್
9. 50 ಹೊದಿಕೆ

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :
**9902334941, 08202002781, 09964070654.**


ನನಗೆ ಬಾಧ್ಯತೆಯುಂಟು. ನಾನು ದೇವರಿಗೂ ಕ್ರಿಸ್ತನಿಗೂ ಬಾಧ್ಯನಾಗಿದ್ದೇನೆ (ರೋಮ. 8:17).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

## ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ಯೆಹೋವನು ಮೇಲಣ ಲೋಕದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ. ಆತನು ಸಮಸ್ತವನ್ನು ಆಳುತ್ತಾನೆ"** (ಕೀರ್ತ. 103:19). ಇಸ್ರಾಯೇಲರ ರಾಜರು ಕೂಡ ಅನಂತರದ ಕಾಲದಲ್ಲಿ ಸೃಷ್ಟಿಯನ್ನು ಆರಾಧಿಸಿ ದೇವರ ಕೋಪಕ್ಕೆ ಗುರಿಯಾದರು. ಇಸ್ರಾಯೇಲನ್ನು ಆಳಿದ ಅರಸುಗಳಲ್ಲಿ ಅತೀ ದುಷ್ಟ ಅರಸರು 3 ಜನರಾಗಿದ್ದರು. ಅವರು ಮನಸ್ಸೇ, ಅಹಾಬ, ಯರೊಬ್ಬಾಮರಾಗಿದ್ದರು (2 ಅರಸು. 21:1–16). ಮನಸ್ಸೆಯು ಅರಸನಾದಾಗ ಹನ್ನೆರಡು ವರುಷದವನಾಗಿದ್ದು ಯೆರುಸಲೇಮಿನಲ್ಲಿ ಐವತ್ತೈದು ವರುಷ ಆಳಿದನು. ಅವನ ತಾಯಿಯ ಹೆಸರು ಹೆಪ್ಸಿಬಾ ಯೆಹೋವನು ಇಸ್ರಾಯೇಲರ ಎದುರಿನಿಂದ ಹೊರಡಿಸಿ ಬಿಟ್ಟ ಅನ್ಯಜನಾಂಗಗಳ ಅಸಹ್ಯ ಕಾರ್ಯಗಳನ್ನು ಅವನು ಅನುಸರಿಸಿ ಆತನ ಚಿತ್ತಕ್ಕೆ ವಿರುದ್ಧವಾಗಿ ನಡೆದನು. ತನ್ನ ತಂದೆಯಾದ ಹಿಜ್ಕೀಯನು ತೆಗೆದು ಹಾಕಿದ ಪೂಜಾ ಸ್ಥಾನಗಳನ್ನು ತಿರುಗಿ ಸ್ಥಾಪಿಸಿ ಇಸ್ರಾಯೇಲರ ಅರಸನಾದ ಆಹಾಬನಂತೆ ಬಾಳನಿಗೋಸ್ಕರ ಯಜ್ಞವೇದಿಗಳನ್ನು ಕಟ್ಟಿಸಿದನು. ಇದಲ್ಲದೆ ಅವನು ತನ್ನ ಮಗನನ್ನು ಆಹುತಿಕೊಟ್ಟನು.

ll) ಮನುಷ್ಯನು ಕೈಯಿಂದ ಮಾಡಿದ ವಿಗ್ರಹವನ್ನು ಆರಾಧಿಸಿದರು. ಹಿಂದಿನ ಪುಟಗಳಲ್ಲಿ ಆರಾಧನೆಗೆ ಸ್ತುತಿಗೆ ಯೋಗ್ಯನಾದ ಜೀವಸ್ವರೂಪನಾದ ದೇವರ ವ್ಯಕ್ತಿತ್ವ ಗುಣ ಸ್ವಭಾವಗಳ ಬಗ್ಗೆ ತಿಳಿದಿರುತ್ತೇವೆ. ದೇವರು ನಮ್ಮನ್ನು ಸಕಲವನ್ನೂ ಸೃಷ್ಟಿಮಾಡಿದ್ದರಿಂದಾಗಿ ನಾವು ದೇವರನ್ನು ಸೃಷ್ಟಿಮಾಡಲು ಸಾಧ್ಯವಿಲ್ಲ. ವಿಮೋ. 20:1–17 ರಲ್ಲಿ 10 ಆಜ್ಞೆಗಳನ್ನು ನೋಡುತ್ತೇವೆ. ಅದರಲ್ಲಿ 2ನೇ ಆಜ್ಞೆಯು ವಿಗ್ರಾಹಾರಧನೆ ಮಾಡುವುದು, ತಪ್ಪು ಹಾಗೂ ಶಾಪಕ್ಕೆ ಕಾರಣವಾಗುತ್ತದೆಂದು ತಿಳಿಸುತ್ತದೆ. "ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು. ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವುದರ ರೂಪವನ್ನು ಮಾಡಿಕೊಳ್ಳಬಾರದು ಅವುಗಳಿಗೆ ಅಡ್ಡಬೀಳಲೂ ಬಾರದು ಪೂಜೆಮಾಡಲೂ ಬಾರದು ನನ್ನ ದೇವರಾದ ಯೆಹೋವನೆಂಬ ನಾನು ನನಗೆ ಸಲತಕ್ಕ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸದವನಾದುದರಿಂದ ನನ್ನನ್ನು ದ್ವೇಷಿಸುವವರ ವಿಷಯದಲ್ಲಿ ತಂದೆಗಳ ದೋಷಫಲವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳವರೆಗೆ ಬರಮಾಡು ವವನಾಗಿಯೂ ನನ್ನನ್ನು ಪ್ರೀತಿಸಿ ನನ್ನ ಆಜ್ಞೆಗಳನ್ನು ಕೈಗೊಳ್ಳುವವರಿಗೋ ಸಾವಿರ ತಲೆಗಳವರೆಗೆ ದಯೆತೋರಿಸುವವನಾಗಿಯೂ ಇದ್ದೇನೆ (ವಿಮೋ. 20:4–6). ದೇವರು ಮೂರ್ತಿ ಪೂಜೆಯನ್ನು ದ್ವೇಷಿಸುತ್ತಾನೆ. ಆತನಿಗೆ ಸಲ್ಲಿಸಬೇಕಾದ ಗೌರವವನ್ನು ಮೂರ್ತಿಗಳಿಗೆ, ಕಲ್ಲುಗಳಿಗೆ, ಪ್ರಾಣಿಗಳಿಗೆ ಸಲ್ಲಿಸುವುದಾದರೆ ಆತನು ಕೋಪಗೊಳ್ಳುತ್ತಾನೆ ಮತ್ತು ಆತನ ಶಾಪವು ಆ ವ್ಯಕ್ತಿಗಳ ಜೀವಿತದಲ್ಲಿ ಬರುವಂತದ್ದಾಗಿರುತ್ತದೆ.

**"ತಾನು ಮಾಡಿಸಿದ ಅಶೇರ ವಿಗ್ರಹ ಸ್ತಂಭವನ್ನು ದೇವಾಲಯದಲ್ಲಿ ಇಡಿಸಿದನು. ಯೆಹೋವನು ಆ ಆಲಯದ ವಿಷಯದಲ್ಲಿ ದಾವೀದನಿಗೂ ಅವನ ಮಗನಾದ ಸೊಲೊಮೋನನಿಗೂ, ಇಸ್ರಾಯೇಲ್ಯರೂ ತಮಗೆ ಮೋಶೆಯ ಮುಖಾಂತರವಾಗಿ ಕೊಡಲ್ಪಟ್ಟ ನನ್ನ ಧರ್ಮಶಾಸ್ತ್ರದ ನಿಬಂಧನೆಗಳನ್ನು ಅನುಸರಿಸಿ ನಡೆಯುವುದಾದರೆ ನನ್ನ ನಾಮ ಮಹತ್ತು ಈ ದೇವಾಲಯದಲ್ಲಿಯೂ ಇಸ್ರಾಯೇಲರ ಎಲ್ಲಾ ಊರುಗಳಲ್ಲಿ ನನಗೆ ಇಷ್ಟವಾಗಿರುವ ಯೆರೂಸಲೇಮಿನಲ್ಲಿಯೂ ಸದಾಕಾಲ ಇರುವುದು. ಇಸ್ರಾಯೇಲರು ಇನ್ನು ಮುಂದೆ ದೇಶ ಭ್ರಷ್ಟರಾಗಿ ಅಲೆದಾಡದೆ ತಮ್ಮ ಪಿತೃಗಳಿಗೆ ಕೊಡಲ್ಪಟ್ಟ ದೇಶದಲ್ಲಿಯೇ ವಾಸವಾಗಿರುವಂತೆ ಮಾಡುವೆನು ಎಂದು ಹೇಳಿದನು. ಆದರೆ ಇಸ್ರಾಯೇಲರು ಆತನ ಮಾತನ್ನು ಕೇಳದೆ ಮನಸ್ಸೆಯಿಂದ ಪ್ರೇರಿತರಾಗಿ ತಮ್ಮ ಮುಂದೆಯೇ ಯೆಹೋವನಿಂದ ಸಂಹೃತರಾದ ಅನ್ಯಜನಾಂಗಗಳಿಗಿಂತಲೂ ದುಷ್ಟರಾದರು. ಆಗ ಯೆಹೋವನು ತನ್ನ ಸೇವಕರಾದ ಪ್ರವಾದಿಗಳ ಮುಂಖಾತರವಾಗಿ ಯೆಹೂದ್ಯರ ಅರಸನಾದ ಮನಸ್ಸೆಯು ಮುಂಚೆ ಇದ್ದ ಅಮೋರಿಯರ ಕೃತ್ಯಗಳಿಗಿಂತ ಅಸಹ್ಯವಾದ ಕೃತ್ಯಗಳನ್ನು ನಡಿಸಿದದರಿಂದಲೂ ವಿಗ್ರಹಗಳಿಂದ ಯೆಹೂದ್ಯರನ್ನು ಪಾಪಕ್ಕೆ ಪ್ರೇರಿಸಿದ್ದರಿಂದಲೂ ಇಸ್ರಾಯೇಲ್ ದೇವರಾದ ಯೆಹೋವನೆಂಬ ನಾನು ಯೆರೂಸಲೇಮಿನವರ ಮೇಲೆಯೂ ಯೆಹೂದದವರ ಮೇಲೆಯೂ ಕೇಡನ್ನು ಬರಮಾಡುವೆನು"**. (2 ಅರಸು. 21:7)

> ನನಗೆ ಆಶೀರ್ವಾದವುಂಟು. ನನ್ನ ದೇವರು ಕ್ರಿಸ್ತನಲ್ಲಿ ಉನ್ನತದಲ್ಲಿ ನನಗೆ ಆತ್ಮೀಕ ವರಗಳನ್ನೂ ಆತ್ಮೀಕ ಆಶೀರ್ವಾದಗಳಿಂದಲೂ ಆಶೀರ್ವಾದಿಸುತ್ತಾನೆ (ಎಫೆ. 1:3).

ಇಂದು ದು:ಖಕರವಾದ ವಿಷಯುವೇನೆಂದರೆ ಕ್ರೈಸ್ತರೆನಿಸಿಕೊಳ್ಳದ ಅನೇಕರು ವಿಗ್ರಹಗಳನ್ನು, ಪ್ರತಿಮೆಗಳನ್ನು, ಫೋಟೋಗಳನ್ನು, ನೂಲುದಾರ, ಶುದ್ಧನೀರು, ಇನ್ನು ಅನೇಕ ಸಂಗತಿಗಳ ಮೇಲೆ ನಂಬಿಕೆಯಿಟ್ಟು ಆರಾಧಿಸುವುದನ್ನು ನಾವು ಕಾಣಬಹುದು. ಇಂದು ಬೋಧಕರು ತಮ್ಮ ಕೆಳಗಿರುವ ಜನರಿಗೆ ಸರಿಯಾದ ರೀತಿಯಲ್ಲಿ ಬೋಧಿಸಬೇಕು. ಯೆಹೆ. 44:23 ಮೀಸಲಾದದ್ದಕ್ಕೂ ಮೀಸಲಲ್ಲದಕ್ಕೂ ಬೇಧವನ್ನು ನನ್ನ ಜನರಿಗೆ ತೋರಿಸಿ ಶುದ್ಧಾಶುದ್ಧ ವಿವೇಚನೆಯನ್ನು ಅವರಿಗೆ ಬೋಧಿಸಲಿ. "ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ. ನೀವು ಜ್ಞಾನವನ್ನು ತಳ್ಳಿಬಿಟ್ಟದ್ದರಿಂದ ಇನ್ನು ನನಗೆ ಯಾಜಕ ಸೇವೆ ಮಾಡದಂತೆ ನಾನು ನಿಮ್ಮನ್ನು ತಳ್ಳಿಬಿಡುವೆನು. ನೀವು ನಿಮ್ಮ ದೇವರ ಧರ್ಮೋಪದೇಶವನ್ನು ಮರೆತ ಕಾರಣ ನಾನು ನಿಮ್ಮ ಸಂತತಿಯವರನ್ನು ಮರೆಯುವೆನು. ಯಾಕೋ. 3:1 ನನ್ನ ಸಹೋದರರೇ ಬೋಧಕರಾದ ನಮಗೆ ಕಠಿಣವಾದ ತೀರ್ಪು ಆಗುವುದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗಬೇಡಿರಿ. ಬೋಧಕರೇ, ದೇವರ ಸೇವಕರೆ ನಿಮ್ಮ ಮಂದೆಗೆ ಸರಿಯಾದ ಮಾರ್ಗ ದರ್ಶನ ಉಪದೇಶಕೊಡಿರಿ. **"ನಿನ್ನ ಹಿಂಡುಗಳ ಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡಿರು. ನಿನ್ನ ಮಂದೆಗಳ ಮೇಲೆ ಮನಸ್ಸಿಡು. ಇವತ್ತು ಅನೇಕ ಬೋಧಕರು ಹಂತ ಹಂತವಾಗಿ ವಿಗ್ರಹರಾಧನೆಗೆ ಅಸ್ಪದಕೊಡುತ್ತಿದ್ದಾರೆ"** (ಜ್ಞಾನೋ. 27:23). ನನಗೆ ಗೊತ್ತಿರುವ ಒಂದು ದೊಡ್ಡ ಕ್ರೈಸ್ತ ಸಂಸ್ಥೆ ಒಂದು ಸಮುಯದಲ್ಲಿ ದೇವರಿಂದ ಆಶೀರ್ವದಿಸಲ್ಪಟ್ಟು ಅನೇಕ ಸೇವಕರನ್ನು ಸಿದ್ಧಮಾಡಿ ಸೇವೆಗೆ ಕಳುಹಿಸಿತು. ಇವತ್ತು ಆ ಸಂಸ್ಥೆಯ ಸ್ಥಿತಿ ನೋಡಿದರೆ ದು:ಖವಾಗುತ್ತದೆ. ಸಭಾಪಾಲಕರು ಪಾದ್ರಿಗಳ ಹಾಗೆ ಉದ್ದನೆಯ ಮೇಲಂಗಿ ಹಾಕುತ್ತಿದ್ದಾರೆ. ಕುತ್ತಿಗೆಗೆ ಶಿಲುಬೆ ನೇತಾಡಿಸಿ ಇಲ್ಲದ ಸಂಪ್ರಾದಯಗಳನ್ನು ಅದು ಅಂಗೀಕರಿಸಿ ಆತ್ಮೀಕವಾಗಿ ಬಿದ್ದಂತಹ ಸ್ಥಿತಿಯಲ್ಲಿದೆ. **"ಸೈತಾನನಿಗೆ ಅವಕಾಶಕೊಡಬೇಡಿರಿ"** (ಎಫೆ. 4:27). ನನಗೆ ಗೊತ್ತಿರುವ ದೊಡ್ಡ ಸೇವಕರು ಒಂದು ಸಮಯದಲ್ಲಿ ಎಲ್ಲಾ ದೇಶಗಳಿಗೆ ಹೋಗಿ ದೇವರ ಶಕ್ತಿಯುತವಾದ ಸೇವೆ ಮಾಡುತ್ತಿದ್ದರು. ಇವತ್ತು ಜನರನ್ನು ಆಕರ್ಷಿಸಲು ದೊಡ್ಡ ಹೆಣ್ಣಿನ ವಿಗ್ರಹವಿಟ್ಟು ಜಪಸರವಿಟ್ಟು ಸೇವೆಸಲ್ಲಿಸುತ್ತಿದ್ದಾರೆ. ಒಬ್ಬ ಸಹೋದರಿ ತನ್ನ ಗಂಡನ ಜೊತೆ ಒಂದು ಸಮಯದಲ್ಲಿ ಒಳ್ಳೇ ಸೇವೆ ಮಾಡುತ್ತಿದ್ದರು ಆದರೆ ಇವತ್ತು ಆತ್ಮೀಕದಲ್ಲಿ ಬಿದ್ದು ಮನೆಯೊಳಗೆ ವಿಗ್ರಹಗಳನ್ನು ಪೋಟೋಗಳನ್ನು ತಂದಿಟ್ಟಿದ್ದಾರೆ. ಹೀಗೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದು.

ಮುಂದುವರಿಯುವುದು.....

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

## ವಿಶೇಷ ಪ್ರಾರ್ಥನೆ :

ಪ್ರತಿ ತಿಂಗಳ ಮೊದಲನೇ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೆವ್ವ ಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

***ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :***

**9902334941, 9964070654**

ಕರ್ತನು ನನ್ನನ್ನು ಸಂತೋಷವಾಗಿಯೂ ಬಲವುಳ್ಳವನಾಗಿಯೂ ದೃಢಕಾಯನಾಗಿಯೂ ಆರೋಗ್ಯವುಳ್ಳವನಾಗಿಯೂ ಉಂಟು ಮಾಡಿದ್ದಾನೆ (ಆದಿ. 1:27).

# ಆರೋಗ್ಯ ಸ್ವರ

## ಕೊಲೆಸ್ಟರಾಲ್ ನಿಯಂತ್ರಣಕ್ಕಾಗಿ :

* ಮೆಂತ್ಯೆಯನ್ನು ಹುರಿದು ಪುಡಿಮಾಡಿ ಬೆಳಗ್ಗೆ ಅಥವಾ ಮಧ್ಯಾಹ್ನ ಆಹಾರಕ್ಕೆ ಮೊದಲು ಬಿಸಿನೀರಿನಲ್ಲಿ ಅಥವಾ ಮಜ್ಜಿಗೆಯಲ್ಲಿ ಕದಡಿ ಕೊಡಿ. ಪ್ರಮಾಣ 1/2–1 1/2ಚಮಚ.
* ಬೆಳ್ಳುಳ್ಳಿಯನ್ನು ಕಾವಲಿಯಲ್ಲಿ ಎಣ್ಣೆ ಹಾಕದೇ ಹುರಿದಿಡಿ. ದಿನಕ್ಕೆ 4–6 ಬೆಳ್ಳುಳ್ಳಿಯ ಸೇವನೆ ಹಿತಕರ.
* ನಿತ್ಯ 1 ಲೋಟ ಸಕ್ಕರೆ ರಹಿತ ಜೇನು ಮಿಶ್ರಿತ ಕರಬೂಜದ ಜ್ಯೂಸ್ ನೀಡಿರಿ.
* ಒಂದು ಲೋಟ ಬಿಸಿ ನೀರಿನಲ್ಲಿ ಒಂದೆರಡು ಇಂಚು ದಾಲ್ಚೀನಿಯನ್ನು ಹುಡಿಮಾಡಿ ಹಾಕಿ. ದಿನಕ್ಕೆ 2 ಬಾರಿ ಅರ್ಧ ಲೋಟದಂತೆ ಈ ನೀರನ್ನು ಖಾಲಿ ಹೊಟ್ಟೆಯಲ್ಲಿ ಸೇವಿಸಲು ಕೊಡಿ.
* ಕರಿಬೇವನ್ನು ಮತ್ತು ಹುರುಳಿಯನ್ನು ಹುರಿದು ಹುಡಿಮಾಡಿ ಖಾರ ಉಪ್ಪು ಸೇರಿ ಚಟ್ನಿಪುಡಿಯನ್ನು ತಯಾರಿಸಿ. ಇದನ್ನು ನಿತ್ಯ 2–4 ಚಮಚ ಆಹಾರದ ಜೊತೆ ಸೇವಿಸಿ.
* ಅಧಿಕ ನೀರಿನ ಸೇವನೆ ಹಿತಕರ. ಬಿಸಿನೀರೂ ಹಿತಕರ.
* ವಿವಿಧ ಬಗೆಯ ಸೊಪ್ಪು ಹಸಿರು ತರಕಾರಿಯಲ್ಲಿನ ಸೆಲ್ಯುಲೋಸ್ ಕೊಲೆಸ್ಟರಾಲ್ ಮಟ್ಟ ಕಡಿಮೆ ಮಾಡಲು ಸಹಕಾರಿ.

## ಹಲ್ಲುನೋವಿನ ನಿವಾರಣೆಗಾಗಿ :

* ನೆಲ್ಲಿಕಾಯಿ ಚೂರ್ಣವನ್ನು ಹಲ್ಲಿಗೆ ಮತ್ತು ವಸಡಿಗೆ ಹಚ್ಚಿ ನಿತ್ಯವೂ ತಿಕ್ಕಬೇಕು. ಜೊತೆಗೆ 1/4ಚಮಚದಷ್ಟು ನೆಲ್ಲಿಕಾಯಿ ಚೂರ್ಣವನ್ನು ಜೇನಿನೊಂದಿಗೆ ನಿತ್ಯ ಸೇವಿಸಲು ಕೊಡಬೇಕು. ಇದರಿಂದ ಮಗುವಿನ ವಸಡಿನಲ್ಲಿ ಉಂಟಾಗುವ ನೋವು, ಬಾವು, ರಕ್ತಸ್ರಾವ ಕಡಿಮೆಯಾಗುತ್ತದೆ.
* ಸೀಬೆಯ ಎಲೆಯ ಕಷಾಯದಿಂದ ನಿತ್ಯ ಮಲಗುವಾಗ ಬಾಯಿ ಮುಕ್ಕಳಿಸಿದರೆ ಮಕ್ಕಳ ಹಲ್ಲುನೋವು, ವಸಡು ನೋವು ಗುಣವಾಗುತ್ತದೆ.
* ಪಪ್ಪಾಯಿಯ ಹಾಲನ್ನು ಹತ್ತಿಯಲ್ಲಿ ಅದ್ದಿ ಹಲ್ಲುನೋವಿರುವ ಕಡೆ ಇರಿಸಿದರೆ ಮಕ್ಕಳ ನೋವು ಕಡಿಮೆಯಾಗುತ್ತದೆ.

---

## ಪ್ರಾರ್ಥನಾ ಮನವಿಗಳು

- ಹೊಸ ವರ್ಷವನ್ನು ಎದುರುಗೊಳ್ಳುವ ಪ್ರತಿಯೊಬ್ಬರಿಗೆ ಕರ್ತನು ಒಳ್ಳೆಯ ಆರೋಗ್ಯ, ಸಮಾಧಾನ, ಸಂತೋಷ, ಸಮೃದ್ಧಿಯನ್ನು ಅನುಗ್ರಹಿಸಲಿ ಎಂದು ಪ್ರಾರ್ಥಿಸಿರಿ.
- ದೇವರು ಸೃಷ್ಟಿಸಿದ ಪ್ರತಿಯೊಂದು ಜನರಿಗೂ ಸುವಾರ್ತೆಗಳು ಸಾರಲ್ಪಡುವಂತೆ ಪ್ರಾರ್ಥಿಸಿರಿ.
- ದೇವರ ಸೇವಕರಿಗೂ, ಸಭೆಯ ವಿಶ್ವಾಸಿಗಳಿಗೂ, ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಪ್ರತಿಯೊಬ್ಬರಿಗೂ ಕರ್ತನು ಸುಭದ್ರತೆಯನ್ನು, ಸಂರಕ್ಷಣೆಯನ್ನು ಕೊಡುವಂತೆ ಪ್ರಾರ್ಥಿಸಿರಿ.
- ನಮ್ಮ ದೇಶದಲ್ಲಿ ಅಧಿಕಾರಕ್ಕೆ ಬಂದಿರುವ ಅಧಿಕಾರಿಗಳು ದೇವರ ಚಿತ್ತದಂತೆ ದೇಶವನ್ನು ಆಳ್ವಿಕೆ ಮಾಡಲು ಕರ್ತನ ಜ್ಞಾನದಿಂದ ತುಂಬಿಸುವುದಕ್ಕಾಗಿ ಪ್ರಾರ್ಥಿಸಿರಿ.
- ವಿದ್ಯಾಭ್ಯಾಸ ಮಾಡುತ್ತಿರುವ ಪ್ರತಿಯೊಂದು ಮಕ್ಕಳು ಭವಿಷ್ಯದಲ್ಲಿ ಮುಂದೆ ಬರಲು, ಪರೀಕ್ಷೆಯಲ್ಲಿ ಉತ್ತಮವಾಗಿ ಬರೆದು ಉತ್ತೀರ್ಣರಾಗಲು ಕರ್ತನು ಜ್ಞಾನವನ್ನು ಕೊಡುವಂತೆ ಪ್ರಾರ್ಥಿಸಿರಿ.

ನನ್ನ ರಕ್ಷಕನಾಗಿರುವ ಯೇಸುವಿನ ಮಧ್ಯದಲ್ಲಿ ಎಲ್ಲಾ ವ್ಯಾಧಿಗಳಗೂ ದೈವೀಕ ಸುಖವೂ ಆರೋಗ್ಯವುಂಟು (ಮತ್ತಾ. 8:16).

# ಸಮಾಧಾನ ಮಹೋತ್ಸವ ಉಡುಪಿ – 2014

**ಫೆಬ್ರವರಿ 14, 15 ಮತ್ತು 16, 2014**
**ಕ್ರಿಶ್ಚಿಯನ್ ಹೈಸ್ಕೂಲ್ ಗ್ರೌಂಡ್, ಉಡುಪಿ.**
**ಸಂಜೆ 6.00 ಗಂಟೆಗೆ**

*ಸಂದೇಶಕರು :*

**ಘನ. ಡಾ॥. ರೋಬರ್ಟ್ ಕನ್ವಿಲ್ಲೆ, ಜೊತೆ ಸುವಾರ್ತಿಕರು**
**ಬಿಲ್ಲಿ ಗ್ರಾಹಂ, ಇವ್ಯಾಂಜಲಿಸ್ಟಿಕ್ ಅಸೋಸಿಯೇಷನ್**

**ಪ್ರಾರ್ಥನಾ ಮನವಿಗಳು**

◆ ಕೂಟಗಳಲ್ಲಿ ಪರಿಶುದ್ಧಾತ್ಮನ ಬಲವಾದ ಪ್ರಸನ್ನತೆಗಾಗಿ ಮತ್ತು ಚಲನೆಗಾಗಿ. ◆ ಜನರ ರಕ್ಷಣೆಗಾಗಿ. ◆ ಸಂದೇಶಕರ ಮೇಲೆ ವಿಶೇಷ ಅಭಿಷೇಕಕ್ಕಾಗಿ. ◆ ಎಲ್ಲಾ ಸಭೆಗಳ ಐಕ್ಯತೆ ಮತ್ತು ಸಹಕಾರಕ್ಕಾಗಿ. ◆ ಕೂಟಗಳಲ್ಲಿ ಅನುಕೂಲಕರವಾದ ವಾತಾವರಣಕ್ಕಾಗಿ. ◆ ಎಲ್ಲಾ ವಿಧವಾದ ಏರ್ಪಾಡುಗಳಿಗಾಗಿ. ◆ ಎಲ್ಲಾ ಆರ್ಥಿಕ ಅಗತ್ಯತೆಗಳು ಒದಗಿಸಲ್ಪಡುವುದಕ್ಕಾಗಿ. ◆ ಸಮಾಧಾನ ಮಹೋತ್ಸವದ ಸಮಿತಿಗಾಗಿ ಮತ್ತು ಎಲ್ಲಾ ಸಿದ್ಧತೆಗಳಿಗಾಗಿ. ◆ ಕೂಟಗಳ ಯಶಸ್ವಿಗಾಗಿ. ◆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಬರುವುದಕ್ಕಾಗಿ. ◆ ಕೂಟಗಳ ಮುಖಾಂತರ ಉಡುಪಿಯಲ್ಲಿ ಉಜ್ಜೀವನ ಉಂಟಾಗುವುದಕ್ಕಾಗಿ.

ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಿ.

## ಸಮಾಧಾನ ಮಹೋತ್ಸವ ಉಡುಪಿ – 2014

**ಅಂಚೆ ಪೆಟ್ಟಿಗೆ –22, ಉಡುಪಿ – 576101. ಫೋನ್ : 9880040432, 9880455145, 9741884102.**

---

## ಡಿಜಿಎಮ್ ಬೇತೇಲ್ ಅಂಕಣ

- ವಿಶ್ವಾಸದಮನೆಯಲ್ಲಿ 7 ವರ್ಷಗಳ ಕಾಲ ವೈದ್ಯಕೀಯ ಶುಶ್ರೂಷೆ ಮತ್ತು ಆರೈಕೆಯನ್ನು ಹೊಂದಿ ಸಂಪೂರ್ಣ ಗುಣಮುಖರಾದ ಮಾಧುರಿಯವರು ತನ್ನ ಹುಟ್ಟೂರಾದ ಜಾರ್ಖಂಡಿಗೆ ತಂದೆ ಹಾಗೂ ಚಿಕ್ಕಪ್ಪರವರೊಂದಿಗೆ ಕುಟುಂಬಕ್ಕೆ ಮರಳಿದ್ದಾರೆ.
- ಜನವರಿ 02 ರಿಂದ 12ನೇ ತಾರೀಖಿನವರೆಗೆ 10 ದಿವಸಗಳ ಕಾಲ ಬಿಡುಗಡೆ, ಉಜ್ಜೀವನ ಹಾಗೂ ಶಕ್ತಿಯ ಕೂಟವನ್ನು ಏರ್ಪಡಿಸಲಾಗಿದೆ.
- ಡಿಸೆಂಬರ್–2013ರಲ್ಲಿ ನಡೆದ 10 ದಿವಸದ ಕೆರೀತ್ ಶಕ್ತಿಯ ಹಾಗೂ ಬಿಡುಗಡೆಯ ಕೂಟವು ಕರ್ತನ ಕೃಪೆಯಿಂದ ಒಳ್ಳೇ ರೀತಿಯಲ್ಲಿ ನಡೆಯಿತು. ಅನೇಕರು ಈ ಕೂಟಗಳಲ್ಲಿ ಭಾಗವಹಿಸಿ ಬಿಡುಗಡೆಯನ್ನು, ಸ್ವಸ್ಥತೆಯನ್ನು, ವಾಕ್ಯದ ರಹಸ್ಯವನ್ನು, ಆಶೀರ್ವಾದವನ್ನು ಕರ್ತನಿಂದ ಹೊಂದಿದರು.

ನಾನು ವ್ಯಾಧಿಯಿಂದಿರುವುದು ದೇವರ ಚಿತ್ತವಲ್ಲ, ಎಲ್ಲದರಲ್ಲೂ ನಾನು ಸುಖವಾಗಿ ಬಾಳುವುದೇ ನನ್ನ ದೇವರ ಇಷ್ಟವಾಗಿದೆ (3 ಯೋಹಾ. 1:2).

# ಸ್ಥಳೀಯ ಮತ್ತು ವಿದೇಶ ಸುದ್ದಿ

* ವಿಶ್ವದ ಮೂರನೇ ಒಂದು ಭಾಗ ಆಹಾರ ವ್ಯರ್ಥ : ಪ್ರಪಂಚದಲ್ಲಿ ತಯಾರಿಸಲಾಗುವ ಮೂರನೇ ಒಂದು ಭಾಗದ ಆಹಾರ ಪದಾರ್ಥವು ವ್ಯರ್ಥವಾಗುತ್ತಿದೆ ಎಂಬ ಆಘಾತಕಾರಿ ವಿಚಾರವನ್ನು ವಿಶ್ವಸಂಸ್ಥೆ ತಿಳಿಸಿದೆ. ವ್ಯರ್ಥವಾಗುತ್ತಿರುವ ಈ ಆಹಾರದ ಬೆಲೆಯು 750 ಶತಕೋಟಿ ಡಾಲರ್‌ಗಳಾಗಿವೆ ಎಂದು ವಿಶ್ವಸಂಸ್ಥೆ ಆಹಾರ ಭದ್ರತಾ ವಿಭಾಗದ ಮಹಾ ನಿರ್ದೇಶಕರು ತಿಳಿಸಿದ್ದಾರೆ.

* ಅಮೆರಿಕಕ್ಕೆ ಅಪ್ಪಳಿಸಿದ ಹಿಮ ಮಾರುತ: ಎಲ್ಲೆಡೆ ಕಗ್ಗತ್ತಲು : ಅಮೆರಿಕ ಇತಿಹಾಸದಲ್ಲೇ ಅತಿ ಭೀಕರ ಎಂದು ಹೇಳಲಾದ ಹಿಮ ಮಾರುತ ಅಪ್ಪಳಿಸಿದ್ದು, ದೇಶದ ಹಲವು ಭಾಗಗಳನ್ನು ಕಗ್ಗತ್ತಲೆಗೆ ದೂಡಿದೆ. ಹಿಮ ಮಾರುತದ ತೀವ್ರತೆಗೆ ಮೂವರು ಬಲಿಯಾಗಿದ್ದಾರೆ. ಈಶಾನ್ಯದ ಓಹಿಯೋ ಕಣಿವೆ, ಟೆಕ್ಸಾಸ್ ಮೆಕ್ಸಿಕೋ ಗಡಿ ಸೇರಿದಂತೆ, ಡಲ್ಲಾಸ್‌ನಲ್ಲಿ ಹಿಮ ಮಾರುತದ ಪರಿಣಾಮ ವಾತಾವರಣ ಥರಗುಟ್ಟತೊಡಗಿದ್ದು, ಶೂನ್ಯಕ್ಕಿಂತಲೂ ಕಡಿಮೆಯಾಗಿದೆ. ಇದು ಸಾಮಾನ್ಯ ಉಷ್ಣತೆಗಿಂತ 30 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆಯಾಗಿದೆ ಎಂದು ಹವಮಾನ ಇಲಾಖೆ ಹೇಳಿದೆ.

* ವಿಶ್ವದಲ್ಲಿ ಅತ್ಯಂತ ಹೆಚ್ಚು ಉತ್ಪಾದನೆಯಾದ ಮತ್ತು ಭಾರತಕ್ಕೆ ಹಲವು ಯುದ್ಧ ಗೆದ್ದು ಕೊಟ್ಟಿದ್ದ ಹಿರಿಮೆಯನ್ನು ಹೊಂದಿದ್ದರೂ, ತಾಂತ್ರಿಕ ದೋಷಗಳಿಂದ 200 ಪೈಲಟ್‌ಗಳ ಸಾವಿಗೆ ಕಾರಣವಾಗಿದ್ದ ಮಿಗ್–21 ಎಫ್‌ಎಲ್ ವಿಮಾನವನ್ನು ಅಧಿಕೃತವಾಗಿ ಸೇವೆಯಿಂದ ಹಿಂದಕ್ಕೆ ಪಡೆಯಲಾಯಿತು. ಇದರೊಂದಿಗೆ ಕಳೆದ 50 ವರ್ಷಗಳಲ್ಲಿ ಭಾರತೀಯ ವಾಯುಪಡೆಯ ಅವಿಭಾಜ್ಯ ಅಂಗವಾಗಿದ್ದ ಯುದ್ಧವಿಮಾನ, ಇತಿಹಾಸದ ಪುಟ ಸೇರಿದಂತಾಗಿದೆ.

* ಮೈಸೂರು ರಾಜಮನೆತನದ ಕೊನೆಯ ಕೊಂಡಿ, ಮಾಜಿ ಸಂಸದ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ, ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಹೃದಯಾಘಾತದಿಂದ ನಗರದ ವಿಕ್ರಮ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಅವರಿಗೆ 60 ವರ್ಷ ವಯಸ್ಸಾಗಿತ್ತು. ಒಡೆಯರ್ ಪತ್ನಿ ಪ್ರಮೋದಾದೇವಿ ಹಾಗೂ ಕುಟುಂಬದ ಸದಸ್ಯರನ್ನು ಅಗಲಿದ್ದಾರೆ.

* ಮೊನ್ನೆಯಿಂದ ಭಾರೀ ಚಳಿ... ಸ್ವಾಮೀ... ತಡೀಯೋಕಾಗಲ್ಲ ಅಂಥಾ ಹೊದಿಕೆಯೊಳಗೆ ಮಾತಾಡಿಕೊಳ್ಳುತ್ತಿದ್ದರೆ, ಇಲ್ಲಿ ಕೇಳಿ, ಜಗತ್ತಿನ ಅತಿ ಚಳಿ ಪ್ರದೇಶವನ್ನು ನಾಸಾದ ಉಪಗ್ರಹ ಪತ್ತೆ ಹಚ್ಚಿದೆ. ಇಲ್ಲಿನ ಚಳಿ ಎಷ್ಟೆಂದು ಕೇಳಿದರೆ, ಥರಗುಟ್ಟತೊಡಗುತ್ತದೆ. ಕಾರಣ ಉಷ್ಣತೆ 93.2 ಡಿಗ್ರಿ!.


## ಬೇಕಾಗಿದ್ದಾರೆ

**24 ಗಂಟೆ ಪ್ರಾರ್ಥನಾ ಗೋಪುರದಲ್ಲಿ ಪ್ರಾರ್ಥಿಸುವ ಪ್ರಾರ್ಥನಾ ವೀರರು ಬೇಕಾಗಿದ್ದಾರೆ.**
**ಊಟ, ವಸತಿ ಸೌಕರ್ಯವನ್ನು ನೀಡಲಾಗುವುದು.**
**ಪ್ರಾರ್ಥನೆ ಮಾಡಲು ಇಚ್ಚಿಸುವವರು**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :**

**9902334941**


ಇಸ್ರಾಯೇಲೇ, ನಾನು ನಿನ್ನನ್ನ ನಿರ್ಮಿಸಿದೆನು, ನೀನು ನನ್ನ ಸೇವಕನು, ನಿನ್ನನ್ನು ಮರೆತುಬಿಡೆನು
(ಯೆಶಾ. 44:21).

**ಆದಿಕಾಂಡ ಪುಸಕ್ತದಿಂದ ಆಯ್ದುಕೊಂಡ ಪದಗಳು :-**

**ಮಕ್ಕಳ ಸ್ವರ**

1) ಅಬ್ರಹಾಮನ ಮುಂಚಿನ ಹೆಸರೇನು?

2) "ಮೋಶೆಯೆಂಬ ವೃಕ್ಷ" ಇದರ ಅರ್ಥವೇನು?

3) ಅಬ್ರಹಾಮನು ಖಾರಾನ್ ಪಟ್ಟಣವನ್ನು ಬಿಟ್ಟು ಹೊರಟಾಗ ಎಷ್ಟು ವರ್ಷದವನಾಗಿದ್ದನು?

4) ಅಬ್ರಹಾಮನ ಸೇವಕನ ಹೆಸರೇನು?

5) "ಇಷ್ಮಾಯೇಲ್ ಎಂಬ ಹೆಸರಿನ ಅರ್ಥವೇನು?

6) "ಲಹೈರೋಯಿ" ಎಂಬ ಪದದ ಅರ್ಥವೇನು?

7) "ಅಬ್ರಹಾಮ" ಎಂಬ ಹೆಸರಿನ ಅರ್ಥವೇನು?

8) "ಸಾರಾ" ಎಂಬ ಹೆಸರಿನ ಅರ್ಥವೇನು?

9) "ಇಸಾಕ" ಎಂಬ ಹೆಸರಿನ ಅರ್ಥವೇನು?

10) "ಚೋಗರ್" ಎಂಬ ಪದದ ಅರ್ಥವೇನು?

---

**ಡಿಸೆಂಬರ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಸರಿ ಉತ್ತರಗಳು :-**

1. ಉಪಶಮನ (ಆದಿ. 5:29).
2. ನೆಫೀಲಿಯರು ಅಥವಾ ಉನ್ನತ ಪುರುಷರು (ಆದಿ. 6:4).
3. ಶೇಮ್, ಹಾಮ್, ಎಫೆತ್ (ಆದಿ. 5:32; 6–10).
4. ಎಂಟು ಮಂದಿ (ಆದಿ. 8:18; 6:13).
5. ಆರುನೂರು (ಆದಿ. 7:6).
6. ವಿಸ್ತೀರ್ಣ (ಆದಿ. 9:27).
7. ಐಗುಪ್ತ (ಆದಿ. 10:6).
8. ಕೂಷನು (ಆದಿ. 10:8).
9. ವಿಂಗಡ (ಆದಿ. 10:25).
10. ತಾರುಮಾರು (ಆದಿ. 11:9).
11. ತೆರಹನು (ಆದಿ. 11:26–27–31).

**ಮನೆ ಮಾರಾಟಕ್ಕಿದೆ**



**ಶಂಕರಪುರದ ದುರ್ಗನಗರದಲ್ಲಿ 1500 sq.ft. R.C.C ಮನೆ ಸಹಿತ 15 ಸೆಂಟ್ಸ್ ಜಾಗ ಮಾರಾಟಕ್ಕಿದೆ.**

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :**

**08007853167, 09764630343.**

ಯೆಹೋವನಿಂದ ಶಾಶ್ವತರಕ್ಷಣೆ ದೊರೆಯುವದು; ಯುಗಯುಗಾಂತರಕ್ಕೂ ನೀವು ನಾಚಿಕೆಗೀಡಾಗುವದಿಲ್ಲ, ಮಾನಭಂಗಪಡುವದಿಲ್ಲ (ಯೆಶಾ. 45:17).